# ಸಮಾಜ ಸುಧಾರಣೆಯ ರೀತಿ
# ಮತ್ತು
# ಇಸ್ಲಾಹೀ ಸಮಿತಿಯ ಹೊಣೆಗಾರಿಕೆಗಳು

(ಖಲೀಫತುಲ್ ಮಸೀಹ್ ರಾಬಿಅ್ ಮತ್ತು ಖಾಮಿಸರ ನಿರ್ದೇಶನಗಳ ಬೆಳಕಿನಲ್ಲಿ)

ಸಂಪಾದನೆ ಮತ್ತು ಪ್ರಕಾಶನ
ಮರ್ಕಝೀ ಇಸ್ಲಾಹೀ ಸಮಿತಿ ಭಾರತ

# ಸಮಾಜ ಸುಧಾರಣೆಯ ರೀತಿ
# ಮತ್ತು
# ಇಸ್ಲಾಹೀ ಸಮಿತಿಯ ಹೊಣೆಗಾರಿಕೆಗಳು
# (ಖಲೀಫತುಲ್ ಮಸೀಹ್ ರಾಬಿಅ್ ಮತ್ತು ಖಾಮಿಸರ ನಿರ್ದೇಶನಗಳ ಬೆಳಕಿನಲ್ಲಿ)

ಸಂಪಾದನೆ ಮತ್ತು ಪ್ರಕಾಶನ
ಮರ್ಕಝೀ ಇಸ್ಲಾಹೀ ಸಮಿತಿ ಭಾರತ

# Islahi Mu'aashira Ke Tareeq
# Aur Islahi Committee ki zimmedariyan
# (Urdu)



| | | |
|---|---|---|
| Compiled by | : | Nazarat Islah - o - Irshad, Qadian |
| Translated by | : | Inamullah |
| Type Setting | : | Inamullah |
| Revised by | : | Muhammad Yusuf |
| Published by | : | Mansooba Bandi Committee Qadian, Distt. Gurdaspur, Punjab -143516 |
| First Edition | : | 2016 |
| Copies | : | 1000 |
| Printed at | : | Fazl-e-Umar Printing Press, Qadian |

# ಮುಖ್ಯವಾದ ಮನವಿ

ನೆನಪಿಡಿರಿ, ನಾವು ಕೆಡುಕನ್ನು ಅದು ಆಗುವ ಮುಂಚೆ ತಡೆಯಬೇಕು. ಅದಕ್ಕಾಗಿ ಯುಕ್ತವಾದ ಕೆಲಸ ತಯಾರು ಮಾಡಬೇಕು. ಸಂಭವಿಸಲು ಸಾಧ್ಯತೆಯಿರುವ ಪ್ರತಿಯೊಂದು ಕೆಡುಕು ಅಥವಾ ರೋಗವನ್ನು ತಡೆಯಲು ಮತ್ತು ಚಿಕಿತ್ಸೆ ನಡೆಸಲು ಎಲ್ಲ ಸಂಭವನೀಯ ಪರಿಹಾರಗಳನ್ನು ನಿರ್ದೇಶಿಸುವುದು ಇಸ್ಲಾಹೀ ಸಮಿತಿಯ ಜವಾಬ್ದಾರಿಯಾಗಿದೆ.

ಇದು ತರಬೇತಿ ಮತ್ತು ಮೇಲ್ನೋಟದ ಕೆಲಸವಾದ್ದರಿಂದ ಸಹಾನುಭೂತಿ, ಪ್ರೀತಿ, ಅನುಕಂಪ ಮತ್ತು ಪ್ರಾರ್ಥನೆಯ ಮೂಲಕ ಸುಧಾರಣೆಯ ಕೆಲಸ ಮಾಡಿರಿ. ಪ್ರಯತ್ನ ಮಾಡಿದ ನಂತರವೂ ಎಲ್ಲಿಯಾದರೂ ಸಹಕಾರ ಲಭಿಸುವುದಿಲ್ಲವಾದರೆ ಕೇಂದ್ರಕ್ಕೆ ತಿಳಿಸಿರಿ. ಸಮಿತಿಯಲ್ಲಿ ಬರುವ ಎಲ್ಲ ಕಾರ್ಯಗಳು ಸದಸ್ಯರು ತಮ್ಮ ಬಳಿ ಇರಿಸಬೇಕಾದ ಅಮಾನತ್ ಆಗಿರುತ್ತದೆ. ಹೊರಗೆ ಅವುಗಳ ಬಗ್ಗೆ ಪ್ರಸ್ತಾಪಿಸುವುದು ಖಂಡಿತವಾಗಿಯೂ ಸಮಂಜಸವಲ್ಲ.

# ಇಸ್ಲಾಹಿ ಸಮಿತಿಯ ಕಾರ್ಯ ವೈಖರಿ
# (ಕೆಲಸ ಮಾಡಬೇಕಾದ ರೀತಿ)

(ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರ ನಿರ್ದೇಶನಗಳು)

"ನಾನು ಒಂದು ಇಸ್ಲಾಹಿ ಸಮಿತಿಯನ್ನು ಸ್ಥಾಪಿಸಿದ್ದೆ ಮತ್ತು ನೀವು ಕೂಡ ದೇಶೀಯ ಮಟ್ಟದಲ್ಲಿ ಇಸ್ಲಾಹಿ ಸಮಿತಿ ಸ್ಥಾಪಿಸಿರಿ ಎಂದೂ ಕೆಲವು ಕೆಡುಕುಗಳನ್ನು ಗುರುತಿಸಿ ಅವುಗಳು ಒಣಗದ ಹುಣ್ಣಾಗುವ ಮುಂಚೆ ಅವುಗಳ ಸುಧಾರಣೆ ಮಾಡಲು ಪ್ರಯತ್ನಿಸಿ ನಿಮ್ಮೊಂದಿಗಿರುವ ನೈತಿಕತೆಗೆ ಸಂಬಂಧಪಟ್ಟ ರೋಗವಿರುವ ರೋಗಿಗಳ ರೋಗಶಮನ ನಡೆಸಲು ಪ್ರಯತ್ನಿಸಬೇಕೆಂದೂ ಎಲ್ಲ ದೇಶಗಳಿಗೆ ನಿರ್ದೇಶನ ನೀಡಿದ್ದೆ....... ನಾನು ನೀಡಿದ್ದ ಉಪದೇಶ ಇದಾಗಿತ್ತು: ಇಸ್ಲಾಹಿ ಸಮಿತಿ ತೀಕ್ಷ್ಣ ಗ್ರಹಿಕೆ ಮತ್ತು ಸೂಕ್ಷ್ಮ ಪರಿಜ್ಞಾನ ಹೊಂದಿರುವ ಪ್ರಜ್ಞಾವಂತರನ್ನು ಒಳಗೊಂಡಿರುವ ವ್ಯಕ್ತಿಗಳದ್ದಾಗಿರಬೇಕು. ಎಲ್ಲೆಲ್ಲ ಕೆಡುಕುಗಳ ವಾಸನೆ ಇದೆ ಎಂದು ಅವರು ಮೂಸಿ ಪತ್ತೆ ಹಚ್ಚಬೇಕು. ಕಣ್ಣಿಗೆ ಕಾಣುತ್ತಿಲ್ಲವಾದರೂ ಅವರ ಘ್ರಾಣಶಕ್ತಿ (ವಾಸನೆ ಗ್ರಹಿಸುವ ಶಕ್ತಿ) ಅಪಾಯ ಎಲ್ಲಿದೆ ಎಂದು ಪತ್ತೆ ಹಚ್ಚುವಂಥದ್ದಾಗಿರಬೇಕು. ಅನಂತರ ಅದು ಸ್ಥಾಯಿಯಾದ ರೋಗ ವಾಗುವ ಮುಂಚೆ ದೂರಮಾಡಬೇಕು. ಎಲ್ಲಿಯಾದರೂ ಕಲಹ ಆಗುವುದನ್ನು, ದಂಗೆ ಶುರುವಾಗುವುದನ್ನು, ಕೊಲೆ ನಡೆಯುವುದನ್ನು ಕಾಯುತ್ತಾ ಅನಂತರ ಇಸ್ಲಾಹಿ ಸಮಿತಿ ಚುರುಕುಗೊಳ್ಳುವುದಾದರೆ, ಅದು ಇಸ್ಲಾಹಿ ಸಮಿತಿ ಅಲ್ಲ. ಅದು ಪೋಲಿಸ್ ಸಮಿತಿ ಆಗುವುದು..... ಒಂದು ಕೇಂದ್ರೀಯ ಇಸ್ಲಾಹಿ ಸಮಿತಿ ಮಾತ್ರವಲ್ಲ; ಪ್ರಾದೇಶಿಕವಾಗಿಯೂ ಪಟ್ಟಣಗಳಲ್ಲಿಯೂ ಪ್ರಜ್ಞಾವಂತ ಇಸ್ಲಾಹಿ ಸಮಿತಿಗಳು ಸ್ಥಾಪಿತವಾಗಬೇಕು. ಅವು ಸಾಧಾರಣ ವ್ಯಕ್ತಿಗಳಿಗೆ ಕಾಣದಂತಹ ಎಲ್ಲ ರೀತಿಯ ಕೆಡುಕುಗಳ ಮೇಲೆ ಗಮನವಿರಿಸಬೇಕು... ಯಾವ ಯಾವ ಮಾರಕ ರೋಗಗಳು ಹರಡಲಿದೆ ಮತ್ತು ಹರಡಬಹುದು ಎಂದು ನೀವು ಕುರುಹುಗಳಿಂದ ಪತ್ತೆ ಹಚ್ಚಿರಿ. ಅನಂತರ ಅವುಗಳನ್ನು ನಿವಾರಿಸಲು ನೀವು ಪ್ರಯತ್ನಿಸಬೇಕಾಗಿ ಬರುವಾಗ, ಅದು ಕೇವಲ ಇಸ್ಲಾಹಿ ಸಮಿತಿಯ ಕೆಲಸವಲ್ಲ. ಇಸ್ಲಾಹಿ ಸಮಿತಿಯ ಕೆಲಸವೇನೆಂದರೆ ಅವುಗಳನ್ನು ಪತ್ತೆ ಹಚ್ಚಿ, ಜಮಾಅತನ್ನು ಎಚ್ಚರಿಸಿ, ಮಜ್ಲಿಸೆ ಆಮಿಲದಲ್ಲಿ ಆ ಸಂಗತಿಗಳನ್ನು ಮುಂದಿರಿಸುವುದು.

ಅನಂತರ ಮಜ್ಲಿಸೆ ಆಮಿಲವನ್ನು ಒಟ್ಟಾಗಿ, ಕೇವಲ ಒಬ್ಬ ಹುದ್ದೇದಾರನನ್ನು ಅಲ್ಲ; ಕೆಲವು ಸಲ ಮೂರು ನಾಲ್ಕು ಹುದ್ದೇದಾರರನ್ನು ಚುರುಕುಗೊಳಿಸಬೇಕಾಗುವುದು, ಕೆಲವೊಮ್ಮೆ ಇಸ್ಲಾಹ್ ವ ಇರ್‌ಶಾದ್ ಸೆಕ್ರೆಟರಿಯನ್ನು ಸಂಪರ್ಕಿಸಬೇಕಾಗುವುದು, ಕೆಲವು ಸಂದರ್ಭಗಳಲ್ಲಿ ಹಣದ ಆವಶ್ಯಕತೆ ಬರುವುದು, ಕೆಲವು ಲಿಟ್‌ರೇಚರ್‌ಗಳನ್ನು ಪ್ರಕಟಿಸ ಬೇಕಾಗಬಹುದು, ಎಲ್ಲಿಗಾದರೂ ಪರ್ಯಟನೆ ನಡೆಸಬೇಕಾಗಬಹುದು, ಮುರಬ್ಬಿಗಳ ವ್ಯವಸ್ಥೆಯನ್ನು ಚುರುಕುಗೊಳಿಸಬೇಕಾಗುವುದು. ಒಟ್ಟಿನಲ್ಲಿ ಹಲವು ಸಂಭನೀಯ ಪರಿಹಾರಗಳಿವೆ. ಅದಕ್ಕಾಗಿ ಕೆಲವು ಸಲ ಮಜ್ಲಿಸೆ ಆಮಿಲದಲ್ಲಿ ಚರ್ಚಿಸುವುದು ಆವಶ್ಯಕವಾಗಿರುತ್ತದೆ. ಆದ್ದರಿಂದ ಇಂತಹ ವಿಷಯಗಳನ್ನು ಮಜ್ಲಿಸೆ ಆಮಿಲದಲ್ಲಿ ಇಡಬೇಕು."

**(ಖುತ್‌ಬಾತೆ ತಾಹಿರ್, ಭಾಗ 13, ಪುಟ 339ರಿಂದ 341ವರೆಗೆ)**

"...ಯಾವ ಕುಟುಂಬದಲ್ಲಿ ದೌರ್ಬಲ್ಯಗಳ ಕುರುಹುಗಳು ಕಾಣುತ್ತಿವೆ ಎಂದು ಗಮನಿಸುವುದು, ಯಾರ ಮಕ್ಕಳು ಪರ್ದಾ ತೊರೆಯುತ್ತಾ ಇದ್ದಾರೆ, ಯಾರ ಮಕ್ಕಳು ಅಹ್ಮದಿಯೇತರರ ಕಡೆಗೆ ಮುಖ ಮಾಡಿದ್ದಾರೆ ಮತ್ತು ಜಮಾಅತಿನೊಂದಿಗಿನ ಪ್ರೀತಿಯ ಬದಲಾಗಿ ಮೆಲ್ಲಮೆಲ್ಲನೆ ಅವರ ಸಂಬಂಧ ಕಡಿದು ಹೋಗಿ ಅಹ್ಮದಿಯೇತರರ ಕಡೆಗೆ ಆಕರ್ಷಿತವಾಗಿದೆ ಎಂಬುದರ ಬಗ್ಗೆ ಗಮನ ಹರಿಸುವುದು ಸಮಿತಿಯ ಕರ್ತವ್ಯವಾಗಿದೆ. ಸಮಸ್ಯೆ ಹದ್ದುಮೀರಿ ಕೆಡುಕುಗಳು ವ್ಯಕ್ತಿಯೊಳಗೆ ನುಗ್ಗಿದ ನಂತರ ಅವುಗಳನ್ನು ಕಿತ್ತು ಹೊರಹಾಕುವುದಕ್ಕಿಂತ ಇಂತಹ ವ್ಯಕ್ತಿಗಳನ್ನು ಆರಂಭದಲ್ಲಿಯೇ ಗಮನಿಸಿ ಅವರನ್ನು ಪ್ರೀತಿಯಿಂದ ಮರಳಿ ತರುವುದು ತುಂಬಾ ಸುಲಭವಾದುದಾಗಿದೆ.

**(ಖುತ್‌ಬಾತೆ ತಾಹಿರ್, ಭಾಗ 11, ಪುಟ 310, 311)**

ಇವರಿಗೆ (ಇಸ್ಲಾಹೀ ಸಮಿತಿಗಳಿಗೆ) ತಮ್ಮ ತಮ್ಮ ವಲಯದಲ್ಲಿ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಮಜ್ಲಿಸ್ ಅನ್ಸಾರುಲ್ಲಾಹ್ ಮತ್ತು ಲಜ್‌ನಾ ಇಮಾಇಲ್ಲಾಹ್ ಎಂಬೀ ಉಪಸಂಘಟನೆಗಳಿಂದ ಎಲ್ಲ ರೀತಿಯ ಪ್ರಯೋಜನ ಪಡೆಯುವ ಹಕ್ಕು ಇದೆ. ಸರಿಯೆಂದು ತೋಚುವುದಾದರೆ, ಕೆಲವು ಕಾರ್ಯಗಳನ್ನು ಖುದ್ದಾಮರ ಮೂಲಕ, ಕೆಲವನ್ನು ಲಜ್‌ನಾದ

ಮೂಲಕ ಬಗೆಹರಿಸಬಹುದಾಗಿದೆ. ಕೆಲವು ವೇಳೆ ಮೂವರು ಸೇರಿ ಪ್ರಯತ್ನ ಮಾಡಬೇಕಾಗುವುದು. ಒಂದು ಕುಟುಂಬದ ವಿಷಯವಾಗಿದ್ದರೆ, ಅಲ್ಲಿ ಒಳ್ಳೆಯ ಪ್ರಭಾವ ಬೀರಲು ಖುದ್ದಾಮ್, ಅನ್ಸಾರ್ ಮತ್ತು ಲಜ್‌ನಾ ಸೇರಿ ಕೆಲಸ ಮಾಡಬೇಕಾಗುವುದು.

**(ಖುತ್‌ಬಾತೆ ತಾಹಿರ್, ಭಾಗ 11, ಪುಟ 311)**

ನೀವು ಸುಧಾರಣೆಯ ಪ್ರಯತ್ನ ಮಾಡಿರಿ. ಮೊದಲ ಆವಶ್ಯಕತೆ ನೀತಿ ನ್ಯಾಯದ್ದಾಗಿದೆ. ನೀತಿಯಲ್ಲಿ ನೆಲೆ ನಿಂತರೆ ನಿಮ್ಮಲ್ಲಿ ಸುಧಾರಕನಾಗುವ ಯೋಗ್ಯತೆ ಉಂಟಾಗುವುದು; ನೀವು ಸುಧಾರಕರಾಗಿರಿ... ಸುಧಾರಣೆ ಮಾಡುವ ವೇಳೆ ಸಮಸ್ಯೆ ವರ್ಧಿಸಲು ಕಾಯಬೇಡಿರಿ, ಬದಲಾಗಿ ಎಲ್ಲೆಲ್ಲ ಸಮಸ್ಯೆಗಳು ಉಂಟಾಗುವ ಸಾಧ್ಯತೆಯಿದೆ ಎಂದು ಅದರ ಕುರುಹುಗಳಿಂದ ಕಂಡು ಹಿಡಿಯಿರಿ. ಅವರ ಕುಟುಂಬಗಳಿಗೆ ತಲುಪಿರಿ, ಆ ಯುವಕರ ಬಳಿ ತಲುಪಿರಿ, ಅವರ ಹಿರಿಯರನ್ನು ಸಮೀಪಿಸಿರಿ, ನೀವು ಓಡಿಯೂ ಅವರನ್ನು ಹಿಡಿಯಲು ಸಾಧ್ಯವಾಗದಷ್ಟು ಮುಂದಕ್ಕೆ ಅವರ ಹೆಜ್ಜೆ ಹೋಗುವ ಮುಂಚೆ ಅವರ ಬಳಿಗೆ ತಲುಪಿರಿ ಮತ್ತು ಪ್ರೀತಿಯಿಂದ ಅವರನ್ನು ಮರಳಿ ತನ್ನಿರಿ. ಅದರೊಂದಿಗೆ ಇತರರ ಸುಧಾರಣೆಯ ಕಡೆಗೆ ಗಮನ ಹರಿಸುವುದಾದರೆ **“ನಿಮ್ಮ ಅನುಗ್ರಹದಿಂದ ಸಮುದಾಯಗಳು ರಕ್ಷಿಸಲ್ಪಡುವುದು”** ಎಂಬ ಅಲ್ಲಾಹನ ವಾಗ್ದಾನ ನಿಮ್ಮ ಪರವಾಗಿ ಖಂಡಿತ ಪೂರ್ತಿಯಾಗುವುದು.

**(ಖುತ್‌ಬಾತೆ ತಾಹಿರ್, ಭಾಗ 11, ಪುಟ 314)**

# ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್‌ರ(ಅಯ್ಯದಹುಲ್ಲಾಹ್) ನಿರ್ದೇಶನಗಳು

4/09/2005

## ನ್ಯಾಶನಲ್ ಮಜ್ಲಿಸೆ ಆಮಿಲ ಜಮಾಅತ್ ಅಹ್ಮದಿಯಾ ಜರ್ಮನಿಯೊಂದಿಗೆ ಮೀಟಿಂಗ್

ಹುಝೂರ್ ಹೇಳಿದರು: ಯಾವ ಯಾವ ಸೆಂಟರ್‌ಗಳಲ್ಲಿ ನಮಾಝಿನಲ್ಲಿ ಕೊರತೆ ಇದೆ ಅಥವಾ ಮೊದಲು ನಮಾಝಿಗೆ ಬರುತ್ತಿದ್ದವರಲ್ಲಿ ಯಾರು ಈಗ ಬರುತ್ತಿಲ್ಲ, ಯಾರ ಮಕ್ಕಳು ನಮಾಝಿಗೆ ಬರುತ್ತಿಲ್ಲ, ಅದಕ್ಕೆ ಕಾರಣವೇನು ಎಂದು ಗಮನಿಸಬೇಕು. ಅನಂತರ ಸುಧಾರಣೆಯ ಕಾರ್ಯಗಳು ನಡೆಯಲಿ. ಯೋಚಿಸಲಾದ ಸುಧಾರಣೆಯ ಮಾರ್ಗದಲ್ಲಿ ವಿಜಯ ಸಾಧಿಸದಿದ್ದರೆ, ಸುಧಾರಣೆ ಹೇಗೆ ಮಾಡಬೇಕು ಎಂದು ಅವಲೋಕಿಸಿ ಇನ್ನೂ ಹೆಚ್ಚಾಗಿ ಯೋಚಿಸಿರಿ.

"ಎಷ್ಟು ಜಮಾಅತುಗಳಿಂದ ನಿಮಗೆ ಸುಸ್ತು ಜನರ ಹೆಸರು ಪಟ್ಟಿಗಳು ಬಂದಿವೆ ಮತ್ತು ನೀವು ಅವುಗಳನ್ನು ಮುರಬ್ಬಿಗಳಿಗೆ ಕೊಟ್ಟಿದ್ದೀರಿ?" ಎಂದು ಹುಝೂರ್ ಸೆಕ್ರಟರಿ ತರಬೇತಿನೊಡನೆ ಕೇಳಿದರು. ಹುಝೂರ್ ಹೇಳಿದರು: ಇಂತಹ ವ್ಯಕ್ತಿಗಳ ಹೆಸರು ಪಟ್ಟಿಯೇ ಇಲ್ಲದಿರುವಾಗ ಕೆಲಸ ಹೇಗೆ ನಡೆಯುವುದು? ಹೇಗೆ ಸುಧಾರಣೆಯ ಕಾರ್ಯಗಳು ಆಗುವುವು? ಈ ವಿಷಯವಾಗಿ ಇಸ್ಲಾಹೀ ಸಮಿತಿ ಏನು ಕೆಲಸ ಮಾಡಿದೆ? ಮೊದಲು ಹೆಸರು ಪಟ್ಟಿ ತಯಾರಿಸಿರಿ. ಅನಂತರ ವೈಯಕ್ತಿಕ (ಪರ್ಸನಲ್) ಸಂಪರ್ಕವಿರಿಸಿರಿ. ಸಂಪರ್ಕವಿರಿಸಿದ ನಂತರ ಅವರಿಗೆ ಮನವರಿಕೆ ಮಾಡಿಸಿರಿ. ಎಷ್ಟು ವ್ಯಕ್ತಿಗಳ ಬಗ್ಗೆ ದೂರು ಇತ್ತು, ಎಷ್ಟು ವ್ಯಕ್ತಿಗಳ ಸುಧಾರಣೆ ಆಯಿತು ಮತ್ತು ಎಷ್ಟು ವ್ಯಕ್ತಿಗಳ ಸಹಕಾರ ಲಭಿಸಿತು ಎಂದು ಸ್ಪಷ್ಟವಾದ ಫಲಿತಾಂಶ ಬರಬೇಕು. ಪ್ರಯತ್ನಗಳ ನಂತರವೂ ಸಹಕರಿಸದವರ ಹೆಸರುಗಳ ಪಟ್ಟಿಯನ್ನು ನನಗೆ ಕಳುಹಿಸಿರಿ"

**(ಅಲ್‌ಫಝ್ಲ್ ಇಂಟರ್‌ನ್ಯಾಶನಲ್ 14/10/2005)**

13/09/2005

## ನ್ಯಾಶನಲ್ ಮಜ್ಲಿಸೆ ಆಮಿಲ ಸ್ವೀಡನ್‌ನೊಂದಿಗೆ ಮೀಟಿಂಗ್

ಹುಝೂರ್ ಹೇಳಿದರು: ನೀವು ನಿಮ್ಮ ಇಸ್ಲಾಹೀ ಸಮಿತಿಯನ್ನು ಸಹ ಚುರುಕುಗೊಳಿಸಿರಿ. ಸುಧಾರಣೆಯ ಕೆಲಸ ಬಹಳ ಮುಖ್ಯವಾದುದಾಗಿದೆ. ಯಾರನ್ನಾದರೂ ಸುಧಾರಣೆ ಮಾಡುವ ಕಾರ್ಯದಲ್ಲಿ ಬಳಲಬಾರದು, ಬದಲಾಗಿ ನಾಲ್ಕು ಸಾವಿರ ಬಾರಿ ಹೇಳಬೇಕಾಗಿ ಬಂದರೂ ಹೇಳಿಕೊಡಿರಿ. ದಣಿಯಲೂ ಬಾರದು ನಿರಾಶೆಹೊಂದಲೂ ಬಾರದು. ಸೌಮ್ಯವಾಗಿ ತಿಳಿಹೇಳುತ್ತಾ ಹೋಗಬೇಕು.

**(ಅಲ್‌ಫಝ್ಲ್ ಇಂಟರ್‌ನ್ಯಾಶನಲ್ 28/10/2005)**

## ನ್ಯಾಶನಲ್ ಮಜ್ಲಿಸೆ ಆಮಿಲ ಲಜ್‌ನಾ ಇಮಾಇಲ್ಲಾಹ್ ಜರ್ಮನಿಯೊಂದಿಗೆ ಮೀಟಿಂಗ್

ಒಂದು ಪ್ರಶ್ನೆಗೆ ಉತ್ತರಿಸುತ್ತಾ ಹುಝೂರ್ ಹೇಳಿದರು: ಲಜ್‌ನಾ ತಮ್ಮ ಇಸ್ಲಾಹಿ ಸಮಿತಿ ಮಾಡಬಹುದು. ಅದರ ಮೆಂಬರ್ ನ್ಯಾಶನಲ್ ಸದರ್ ಲಜ್‌ನಾ, ಪ್ರಾದೇಶಿಕ ಸದರ್, ನಾಇಬ್ ಸದರ್, ಸೆಕ್ರಿಟರಿ ತರ್‌ಬಿಯತ್, ಹಿರಿಯ (ಸೀನಿಯರ್) ಲಜ್‌ನಾ ಮೆಂಬರ್ ಆಗಿರುವರು. ಆದರೆ ಈ ಸಮಿತಿ ಲಜ್‌ನಾಗೆ ಸಂಬಂಧಪಟ್ಟ ಕೇಸುಗಳನ್ನು ಮಾತ್ರ ನೋಡುವುದು. ಕೆಲವು ಸ್ಥಳಗಳಲ್ಲಿ ಹುಡುಗರು ಸಹ ಒಳಪಟ್ಟಿರುತ್ತಾರೆ. ಅಂತಹ ಸಂಗತಿಗಳು ಹೇಗಿದ್ದರೂ ಕೇಂದ್ರೀಯ (ಮರ್ಕಝ್) ಇಸ್ಲಾಹೀ ಸಮಿತಿಗೆ ಹೋಗುವುದು.

**(ಅಲ್‌ಫಝ್ಲ್ ಇಂಟರ್‌ನ್ಯಾಶನಲ್ 07/07/2006)**

05/05/2008

## ನ್ಯಾಶನಲ್ ಮಜ್ಲಿಸೆ ಆಮಿಲ ನೈಜೀರಿಯಾದೊಂದಿಗೆ ಮೀಟಿಂಗ್

ನ್ಯಾಶನಲ್ ಸೆಕ್ರೆಟರಿ ತರ್‌ಬಿಯತ್‌ನೊಂದಿಗೆ ಹುಝೂರ್ ಹೇಳಿದರು: ನ್ಯಾಶನಲ್ ಮಟ್ಟದಲ್ಲಿ ಮತ್ತು ಲೋಕಲ್ ಮಟ್ಟದಲ್ಲಿ ಸಮಿತಿಗಳನ್ನು ಮಾಡಿರಿ. ತರಬೇತಿ ಸಮಿತಿ ಇದೆ ಎಂದಾದರೆ, ಅದು ಏನು ಕೆಲಸ ಮಾಡುತ್ತಿದೆ? ಸುವ್ಯಸ್ಥಿತವಾದ ಇಸ್ಲಾಹೀ ಸಮಿತಿ ಸ್ಥಾಪಿಸಿರಿ. ಸೆಕ್ರೆಟರಿ ತರ್‌ಬಿಯತ್ ಸ್ವತಃ ಸಮಿತಿಯ ಸದರ್ ಆಗಿರುತ್ತಾರೆ. (ಖಲೀಫತುಲ್ ಮಸೀಹರು ಈಗ ಭಾರತಕ್ಕಾಗಿ ಅಮೀರ್/ಸದರ್‌ರನ್ನು ಇಸ್ಲಾಹೀ ಸಮಿತಿಯ ಸದರ್ ಆಗಿ ನಿಶ್ಚಯಿಸಿರುವರು.) ಅದರ ಮೆಂಬರ್‌ಗಳಲ್ಲಿ ಮುಬಲ್ಲಿಗ್ ಇನ್‌ಚಾರ್ಜ್, ಸದರ್ ಅನ್ಸಾರುಲ್ಲಾಹ್, ಸದರ್ ಖುದ್ದಾಮುಲ್ ಅಹ್ಮದಿಯಾ, ಲಜ್‌ನಾದ ಪ್ರತಿನಿಧಿ ಮತ್ತು ಜಮಾಅತಿನ ಒಬ್ಬ ಪ್ರತಿನಿಧಿ (ಈ ಕೆಲಸಕ್ಕೆ ಸಮಂಜಸವಾದ ವ್ಯಕ್ತಿ) ಇರಬೇಕು. ಎಲ್ಲ ಸ್ಥಳಗಳಲ್ಲಿ ಸಮಿತಿಗಳನ್ನು ಮಾಡಿರಿ. ನಿಮ್ಮಿಂದ ಹಲವು ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯ.

**(ಅಲ್‌ಫಝ್ಲ್ ಇಂಟರ್‌ನ್ಯಾಶನಲ್ 11/07/2008)**

05/05/2008

## ಮುಬಲ್ಲಿಗ್ ಸಿಲ್‌ಸಿಲಾ ನೈಜೀರಿಯಾದೊಂದಿಗೆ ಮೀಟಿಂಗ್

ಇಸ್ಲಾಹಿ ಸಮಿತಿಯ ಬಗ್ಗೆ ಹುಝೂರ್ ಹೀಗೆ ನಿರ್ದೇಶಿಸಿದರು: ಸಮಸ್ಯೆ ಉಂಟಾಗುವಾಗ ನೋಡುವ ಎಂದು ಯೋಚಿಸುವುದು ತಪ್ಪು. ಸಮಸ್ಯೆ ಉಂಟಾಗುವ ಮುಂಚೆ ಪರಿಸ್ಥಿತಿಯ ಮೇಲೆ ಗಮನವಿರಬೇಕು. ಇಲ್ಲಿಂದ ಸಮಸ್ಯೆ ಉಂಟಾಗಬಹುದು ಎಂದು ತಿಳಿದಿರಬೇಕು..... ಸಮಸ್ಯೆಗಳು ಹದ್ದು ಮೀರುವ ಮುಂಚಿತವಾಗಿ ಅದರ ಸುಧಾರಣೆ ಮಾಡುವುದು ಆವಶ್ಯಕ.

ಹುಝೂರ್ ಹೇಳಿದರು: ಅಪ್ರಾಮಾಣಿಕತೆ ತೋರಿಸುವ ಹುದ್ದೇದಾರರನ್ನು ವಜಾಗೊಳಿಸಿರಿ. ಅವರಿಂದ ಯಾವುದೇ ಸೇವೆ

ಪಡೆಯಬೇಡಿರಿ. ಅವರನ್ನು ಸುಧಾರಣೆ ಮಾಡುವುದು, ಅವರಿಗೆ ಇಸ್ಲಾಮಿನ ಅಧ್ಯಾಪನೆ ಹೇಳಿಕೊಡುವುದು ಮತ್ತು ಅವರ ತರಬೇತಿ ಮಾಡುವುದು ಮುಬಲ್ಲಿಗರ ಕೆಲಸವಾಗಿದೆ. ಸಮಸ್ಯೆ ಹದ್ದುಮೀರುವ ಮುಂಚಿತವಾಗಿ ಅದರ ಸುಧಾರಣೆ ಮಾಡುವುದು ಆವಶ್ಯಕ.

**(ಅಲ್‌ಫಝ್ಲ್ ಇಂಟರ್‌ನ್ಯಾಶನಲ್ 11/07/2008)**

## ನ್ಯಾಶನಲ್ ಮಜ್ಲಿಸೆ ಆಮಿಲ ಜಮಾಅತ್ ಅಹ್ಮದಿಯಾ ಜರ್ಮನಿಯೊಂದಿಗೆ ಮೀಟಿಂಗ್

ಒಂದು ತರಬೇತಿಯ ವಿಷಯದ ಕಡೆಗೆ ಗಮನಹರಿಸುತ್ತಾ ಹುಝೂರ್ ಹೇಳಿದರು: ನಿಮ್ಮ ಮೀಟಿಂಗ್‌ಗಳ ಮತ್ತು ಮಜ್ಲಿಸ್‌ಗಳ ಮಾತುಗಳನ್ನು ಬಯಲು ಆಗದಂತೆ ಜೋಪಾನವಾಗಿಡಿರಿ. ಇದು ಮುಖ್ಯವಾದ ಸಂಗತಿಯಾಗಿದೆ. ಮಜ್ಲಿಸ್‌ಗಳ ಸಂಗತಿಗಳು ಅಮಾನತ್ತಾಗಿರುತ್ತದೆ (ವಿಶ್ವಸ್ತ ನಿಧಿ). ಆದ್ದರಿಂದ ಅದನ್ನು ಗಮನದಲ್ಲಿಡಬೇಕು.

**(ಅಲ್‌ಫಝ್ಲ್ ಇಂಟರ್‌ನ್ಯಾಶನಲ್ 07/07/2006)**

## ಹುದ್ದೇದಾರರು ಎಲ್ಲ ಸಂಗತಿಗಳನ್ನು ಕಡೆಗಣಿಸದಿರಿ.

ಯಾವಾಗಲೂ ರೋಗ ಪತ್ತೆಯಾದರೆ ಅದನ್ನು ಬೇಗನೆ ಹಿಡಿಯಿರಿ ಮತ್ತು ಅಲ್ಲಿಯೇ ಅದನ್ನು ಬೇರು ಸಹಿತ ಕಿತ್ತುಹಾಕಿರಿ. ಹುದ್ದೇದಾರರು ಪ್ರತಿಯೊಂದು ಸಂಗತಿಯನ್ನು ಕಡೆಗಣಿಸದೆ ಪ್ರತಿಯೊಂದು ಕೆಡುಕನ್ನು ಆರಂಭದಿಂದಲೇ ತಡೆಯುವ ಪ್ರಯತ್ನ ಮಾಡಬೇಕು. ಅದನ್ನು ಬೆಳೆಯಲು ಮತ್ತು ಹರಡಲು ಬಿಡಬಾರದು. ಕಡಿಮೆ ಪಕ್ಷ ನನಗೆ ತಿಳಿಸಬೇಕು. ಆಗ ಖುತ್‌ಬಗಳ ಮೂಲಕ ಆ ಕೆಡುಕನ್ನು ತಡೆಯಲು ನಾನು ಪ್ರಯತ್ನಿಸುವೆನು. ಕೇಂದ್ರೀಯ ಇಸ್ಲಾಹೀ ಸಮಿತಿ ಸಹ ಇದರ ಕಡೆಗೆ ಗಮನ ಹರಿಸಬೇಕು. ಇದೇ ನಿರ್ದೇಶನವನ್ನು ಸ್ಥಳೀಯ ಇಸ್ಲಾಹೀ ಸಮಿತಿಗೆ ಸಹ ಕಳುಹಿಸಿರಿ. ಇದರ ಬೆಳಕಿನಲ್ಲಿ ತಮ್ಮ ಜಮಾಅತುಗಳಲ್ಲಿ

ಅವಲೋಕನ ನಡೆಸುತ್ತಿರಲು ಮತ್ತು ಸುಧಾರಣೆ ಮಾಡಬೇಕಾದ ವಿಷಯಗಳ ಮೇಲೆ ಬೇಗನೆ ಕೆಲಸ ನಡೆಸಿ ನಿಮಗೆ ರಿಪೋರ್ಟ್ ನೀಡಲು ತಾಕೀತು ಮಾಡಿರಿ. ಕೆಡುಕನ್ನು ಮರೆಮಾಚುವುದು ಎಂದರೆ ಕೆಡುಕಿನ ವಿವರ ನನಗೆ ಸಹ ತಲುಪದ ರೀತಿಯಲ್ಲಿ ಮರೆಸುವುದು ಎಂದಲ್ಲ. ಬದಲಾಗಿ ಅದರ ಅರ್ಥ, ಕೆಡುಕನ್ನು ಜನರೆಡೆಯಲ್ಲಿ ಬಯಲು ಮಾಡಬಾರದು ಎಂದಾಗಿದೆ. ಹುದ್ದೇದಾರರು ಯಾವುದಾದರೂ ಸಂಗತಿಯನ್ನು ಮರೆಸುವುದಾದರೆ ಅವರು ತಮ್ಮ ಜವಾಬ್ದಾರಿಯಲ್ಲಿ ವಂಚನೆ ಮಾಡಿರುತ್ತಾರೆ. ಶಾಖಾ ಸಂಘಟನೆಗಳ ಮತ್ತು ಜಮಾಅತಿನ ಹುದ್ದೇದಾರರು ತಮ್ಮ ಕರ್ತವ್ಯಗಳ ಹಕ್ಕನ್ನು ನೆರವೇರಿಸುತ್ತಿಲ್ಲ ಎಂದು ಈ ಬಗ್ಗೆ ನನಗೆ ಬರುವ ರಿಪೋರ್ಟ್‌ಗಳಿಂದ ಅನಿಸುತ್ತಿದೆ. ಕೆಲವು ಗಣ್ಯರ ತಪ್ಪುಗಳನ್ನು ಕಡೆಗಣಿಸುವ ಮತ್ತು ಸಾಮಾನ್ಯರ ತಪ್ಪುಗಳಿಗೆ ತಕ್ಷಣ ಶಿಕ್ಷೆ ಕೊಡಿಸಲಾಗುವ ರೀತಿ ಕಂಡು ಬರುತ್ತಿದೆ. ಇಂತಹ ಎಲ್ಲ ಸಂಗತಿಗಳನ್ನು ಇಲ್ಲಿ ಕಳುಹಿಸುವುದು ನಿಮ್ಮ ಕೆಲಸವಾಗಿದೆ. ಅನಂತರ ಹೇಗೆ ಬೇಕಾದರೂ ತೀರ್ಮಾನ ಮಾಡುವುದು ಕಾಲದ ಖಲೀಫರ ಕೆಲಸವಾಗಿದೆ.

ಇಸ್ಲಾಹೀ ಸಮಿತಿಯ ಕೆಲಸಗಳ ಬಗ್ಗೆ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್[(ರಹ್ಮಹುಲ್ಲಾಹ್)] ಮತ್ತು ನಾನು ನೀಡಿದ ಎಲ್ಲ ನಿರ್ದೇಶನಗಳನ್ನು ಒಟ್ಟು ಸೇರಿಸಿ ಜಮಾಅತುಗಳಿಗೆ ಕಳುಹಿಸಿರಿ. ಅದಲ್ಲದೆ ವಿವಿಧ ದೇಶಗಳ ನ್ಯಾಶನಲ್ ಮಜ್ಲಿಸ್ ಆಮಿಲಗಳಿಗೆ ಮತ್ತು ಶಾಖಾ ಸಂಘಟನೆಗಳ ಮಜ್ಲಿಸೆ ಆಮಿಲಗಳಿಗೆ ಹಲವು ಸಂದರ್ಭಗಳಲ್ಲಿ ನಾನು ನೀಡಿದ (ಅವು ಅಲ್‌ಫಝ್ಲ್ ಮತ್ತು ಇತರ ಪತ್ರಿಕೆಗಳಲ್ಲಿ ಪ್ರಕಟವಾಗಿದೆ.) ನಿರ್ದೇಶನಗಳನ್ನು ಸಹ ಒಟ್ಟುಗೂಡಿಸಿರಿ. ಇವುಗಳ ಬೆಳಕಿನಲ್ಲಿ ಇಸ್ಲಾಹೀ ಸಮಿತಿಗಳು ಸ್ಥಳೀಯ ಮತ್ತು ಕೇಂದ್ರೀಯ ಮಟ್ಟದಲ್ಲಿ ಕೆಲಸ ಮಾಡಬೇಕು.

**(ಹುಝೂರರ ಪತ್ರ – 5/11/2010)**

31/12/2004

## ನ್ಯಾಶನಲ್ ಮಜ್ಲಿಸೆ ಆಮಿಲ ಜಮಾಅತ್ ಅಹ್ಮದಿಯಾ ಫ್ರಾನ್ಸ್‌ನೊಂದಿಗೆ ಮೀಟಿಂಗ್

ಹುಝೂರ್ ಹೇಳಿದರು: ಎಂ.ಟಿ.ಎ ಸಹ ಎಲ್ಲ ಮನೆಯಲ್ಲಿ ಇರಬೇಕು. ಖುತ್‌ಬ ಕೇಳುವುದರ ಬಗ್ಗೆ ಕೇವಲ ಗಮನ ಹರಿಸಿ ಕೊಡುವುದು ಸಾಕಾಗುವುದಿಲ್ಲ. ಬದಲಾಗಿ ಎಷ್ಟು ಜನರು ಖುತ್‌ಬವನ್ನು ಕೇಳಿದರು ಎಂಬುದರ ವ್ಯವಸ್ಥಿತವಾದ ಡಾಟಾ ಒಂದುಗೂಡಿಸಿರಿ. ಖುತ್‌ಬ ಕೇಳದ ಮನೆಯಲ್ಲಿ ಹೆಚ್ಚಾಗಿ ಜಗಳಗಳು ಮತ್ತು ಸಮಸ್ಯೆಗಳು ಉಂಟಾಗುತ್ತವೆ. ಕೇಳುವುದಾದರೆ ಗಮನವಿಟ್ಟು ಕೇಳುವುದಿಲ್ಲ.

**(ಅಲ್‌ಫಝ್ಲ್ ಇಂಟರ್‌ನ್ಯಾಶನಲ್ 11/02/2005)**

03/05/2005

## ಮಜ್ಲಿಸೆ ಆಮಿಲ ಖುದ್ದಾಮುಲ್ ಅಹ್ಮದಿಯಾ ಕೀನ್ಯದೊಂದಿಗೆ ಮೀಟಿಂಗ್

ತರಬೇತಿಗೆ ಸಂಬಂಧಿಸಿ ಹುಝೂರ್ ಹೇಳಿದರು: ನಿಯತವಾಗಿ ಮಜ್ಲಿಸೆ ಆಮಿಲದಲ್ಲಿ ತರಬೇತಿ ಕ್ಲಾಸ್‌ಗಳು ನಡೆಸಬೇಕು. ಖುದ್ದಾಮ್‌ರಿಗೆ ಪವಿತ್ರ ಖುರ್‌ಆನ್ ಓದಲು, ನಮಾಝ್ ಮತ್ತು ಅದರ ಅರ್ಥ ಕಲಿಸಬೇಕು. ಧಾರ್ಮಿಕ ವಿಷಯಗಳ ಅರಿವು ಇರಬೇಕು. ನಮಾಝ್ ಅನುಷ್ಠಿಸುವುದರ ಕಡೆಗೆ ಗಮನವಿರಲಿ. ತಮ್ಮ ತರಬೇತಿ ಕ್ಲಾಸುಗಳಲ್ಲಿ ಮುಬಲ್ಲಿಗ್ ಮತ್ತು ಮುಅಲ್ಲಿಮರ ನೆರವನ್ನು ಪಡೆಯಿರಿ.

**(ಅಲ್‌ಫಝ್ಲ್ ಇಂಟರ್‌ನ್ಯಾಶನಲ್ 20/05/2005)**

## ನ್ಯಾಶನಲ್ ಮಜ್ಲಿಸೆ ಆಮಿಲ ಅನ್ಸಾರುಲ್ಲಾಹ್ ಕೀನ್ಯದೊಂದಿಗೆ ಮೀಟಿಂಗ್

ಖಾಇದ್ ತರ್‌ಬಿಯತ್‌ಗೆ ನಿರ್ದೇಶನ ನೀಡುತ್ತಾ ಹುಝೂರ್ ಹೇಳಿದರು: ಪ್ರತಿಯೊಬ್ಬ ಅನ್ಸಾರ್ ಮೆಂಬರ್ ಐದು ಹೊತ್ತಿನ ನಮಾಝ್ ಜಮಾಅತಾಗಿ ಅನುಷ್ಠಿಸುವಂತೆ, ಜುಮಾ ನಮಾಝ್‌ನಲ್ಲಿ ನಿಯತವಾಗಿ ಭಾಗವಹಿಸುವಂತೆ, ಖಲೀಫತುಲ್ ಮಸೀಹರ ಖುತ್‌ಬಗಳನ್ನು

ನಿಯತವಾಗಿ ಕೇಳುವಂತೆ ಮಾಡಲು ಪ್ರಯತ್ನಿಸಿರಿ. ಪವಿತ್ರ ಖುರ್‌ಆನ್ ಓದಲು ಗೊತ್ತಿರುವವರು ದಿನಾಲೂ ಓದಲಿ. ಕನಿಷ್ಠ ಪಕ್ಷ ಎರಡು ರುಕೂಅ್‌ವಿನ ತಿಲಾವತ್ ಮಾಡಲಿ. ಪವಿತ್ರ ಖುರ್‌ಆನ್ ಓದಲು ಗೊತ್ತಿರದವರಿಗೆ ವಿಶೇಷ ದರ್ಸ್‌ಗಳ ಪ್ರೋಗ್ರಾಮ್ ನಡೆಯಬೇಕು. ಪವಿತ್ರ ಖುರ್‌ಆನ್ ಒಳ್ಳೆಯ ಸ್ವರದಲ್ಲಿ ಓದಬಲ್ಲವನು ಅವರಿಗಾಗಿ ಎರಡು ರುಕೂಅ್ ಓದಲಿ.

**(ಅಲ್‌ಫರ್ಝ್‌ಲ್ ಇಂಟರ್‌ನ್ಯಾಶನಲ್ 20/05/2005)**

## ನ್ಯಾಶನಲ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಯು.ಎಸ್.ಎ.ದೊಂದಿಗೆ ಮೀಟಿಂಗ್

ಮುಹ್‌ತಮಿಮ್ ತರ್‌ಬಿಯತ್‌ಗೆ ಹುಝೂರ್ ಹೀಗೆ ನಿರ್ದೇಶಿಸಿದರು: ನಿಮಗೆ ಸಂಪರ್ಕ ಮತ್ತು ಸಂಬಂಧವಿಲ್ಲದ ಖುದ್ದಾಮ್‌ಗಳೊಂದಿಗೆ ಸಂಪರ್ಕವಿರಿಸಲು ಯೋಜನೆ ಮಾಡಿರಿ. ಮಸೀದಿಗೆ ಬರದ ಮತ್ತು ಸಂಪರ್ಕವಿರಿಸದ ಖುದ್ದಾಮರ ಡಾಟಾ ಒಟ್ಟುಗೂಡಿಸಿರಿ. ಈ ರೀತಿಯಲ್ಲಿ ಖುದ್ದಾಮರನ್ನು ತಮ್ಮ ಸಮೀಪಕ್ಕೆ ತಂದು ಒಟ್ಟಿಗೆ ಸೇರಿಸಿರಿ.

ಹುಝೂರ್ ಹೇಳಿದರು: ನೀವು ಖುದ್ದಾಮರನ್ನು ಮಸೀದಿಗೆ ತರಲು ಆಕರ್ಷಣೆ ಉಂಟು ಮಾಡಿರಿ. ಅದಕ್ಕೆ ಉತ್ತರವಾಗಿ ಹುಝೂರಿಗೆ ಹೀಗೆ ಹೇಳಲಾಯಿತು: ದೇಶದಲ್ಲಿ ಒಟ್ಟು 60 ಜಮಾಅತುಗಳು ಇವೆ ಮತ್ತು ನಲ್ವತ್ತರಲ್ಲಿ ವ್ಯವಸ್ಥಿತವಾದ ಸೆಂಟರ್‌ಗಳಿವೆ. ಅಲ್ಲಿ ಆಟ, ಸ್ಪರ್ಧೆ ಇತ್ಯಾದಿಗಳ ಪ್ರೋಗ್ರಾಮ್ ನಡೆಸಲಾಗುತ್ತದೆ.

**(ಅಲ್‌ಫರ್ಝ್‌ಲ್ ಇಂಟರ್‌ನ್ಯಾಶನಲ್ 12/08/2005)**

05/06/2005

## ನ್ಯಾಶನಲ್ ಮಜ್ಲಿಸೆ ಆಮಿಲ ಕೆನಡದೊಂದಿಗೆ ಮೀಟಿಂಗ್

ತರ್‌ಬಿಯತ್ ವಿಭಾಗಕ್ಕೆ ಹುಝೂರ್ ಹೀಗೆ ನಿರ್ದೇಶನ ನೀಡಿದರು: ಎಂ.ಟಿ.ಎ. ಎಷ್ಟು ಜನರು ಕೇಳುತ್ತಾರೆ ಎಷ್ಟು ಜನರು ಕೇಳುತ್ತಿಲ್ಲ ಎಂದು ಅವಲೋಕಿಸಿರಿ. ಕೆಲವು ಅಪಾರ್ಟ್‌ಮೆಂಟಿನಲ್ಲಿ ಎಂ.ಟಿ.ಎ. ಇಲ್ಲ. ಕೆಲವು ಸ್ಥಳಗಳಲ್ಲಿ ಡಿಶ್ ಅಳವಡಿಸಲು ಅಡೆತಡೆಗಳು ಇವೆ. ಅವರು ಹೇಗೆ ಕೇಳುತ್ತಾರೆ ಎಂದು ಸಹ ಅವಲೋಕಿಸಿರಿ. ಯಾವುದಾದರೂ ವಿಶೇಷವಾದ ತರಬೇತಿ ವಿಷಯವಿದ್ದರೆ ಅದನ್ನು ಪ್ರಿಂಟ್ ಮಾಡಿ ಮನೆಗಳಿಗೆ ತಲುಪಿಸಬಹುದಾಗಿದೆ. ಕಾರುಗಳಲ್ಲಿ ಯಾತ್ರೆ ಮಾಡುವವರಿಗೆ ಆಡಿಯೋ ಕೇಸಟ್‌ಗಳು ನೀಡಬಹುದಾಗಿದೆ.

ಹುಝೂರ್ ಹೇಳಿದರು: ಮಸೀದಿಗೆ ಬರುವವರಲ್ಲಿ ಎರಡು ಬಗೆಯವರು ಇದ್ದಾರೆ. ಒಂದು ಸಹಕರಿಸುವ ವರ್ಗ ಆಗಿರುತ್ತದೆ. ಇನ್ನೊಂದು ವರ್ಗದವರು ಮಸೀದಿಗೆ ಬರುತ್ತಾರೆ; ಆದರೆ ಅವರ ಕಡೆಯಿಂದ ಯಾವುದೇ ಸಹಕಾರವಿರುವುದಿಲ್ಲ.

ಹುಝೂರ್ ಹೇಳಿದರು: ಮೂರನೇ ವರ್ಗದ ಜನರು ಮಸೀದಿಗೆ ಬರುವುದೇ ಇಲ್ಲ ಅಥವಾ ಬಹಳ ವಿರಳವಾಗಿ ಬರುತ್ತಾರೆ. ಅವರಿಗೆ ಜಮಾಅತಿನ ವ್ಯವಸ್ಥೆಯೊಂದಿಗೆ (ನಿಝಾಮ್) ಸಂಬಂಧವಿರುವುದಿಲ್ಲ. ಇಂತಹ ಜನರ ತರಬೇತಿಗಾಗಿ ಹೆಚ್ಚು ಪ್ರೋಗ್ರಾಮ್ ಆಗಬೇಕು. ಎಲ್ಲರಿಗೂ ಒಂದೇ ತತ್ವ ಜಾರಿಮಾಡಲು ಸಾಧ್ಯವಲ್ಲ. ಪ್ರತಿಯೊಬ್ಬರ ತರಬೇತಿಗೆ ವಿವಿಧ ಪ್ರೋಗ್ರಾಮ್ ನಡೆಯಬೇಕು. ಒಟ್ಟಿನಲ್ಲಿ ತಮ್ಮ ತರಬೇತಿ ಕಾರ್ಯಕ್ರಮಗಳನ್ನು ಈ ರೀತಿಯಲ್ಲಿ ಮಾಡಿ ನೋಡಿರಿ.

ಹುಝೂರ್ ಹೇಳಿದರು: ನೀವು ಶಾಖಾ ಸಂಘಟನೆಯೊಂದಿಗೆ ಸೇರಿಕೊಂಡು ಅವರ ನೆರವಿನೊಂದಿಗೆ ಕೆಲವು ಕಾರ್ಯಕ್ರಮಗಳನ್ನು ಉತ್ತಮಗೊಳಿಸಬಹುದಾಗಿದೆ ಅಥವಾ ಅವರ ಕಾರ್ಯಕ್ರಮಗಳಲ್ಲಿ ನೀವು ನೆರವು ನೀಡಿದರೆ ಅದನ್ನು ಉತ್ತಮಗೊಳಿಸಬಹುದಾಗಿದೆ. ನೀವು ಶಾಖಾ ಸಂಘಟನೆಗಳಿಗೆ ಕಾರ್ಯಕ್ರಮಗಳನ್ನು ತಯಾರು ಮಾಡಿ ಕೊಡಬೇಕಾಗಿಲ್ಲ. ಬದಲಾಗಿ, ಅವರ ಕಾರ್ಯಕ್ರಮಗಳಲ್ಲಿ ಅವರಿಗೆ ನೆರವು ನೀಡಬೇಕು.

ನ್ಯಾಶನಲ್ ಸೆಕ್ರಿಟರಿ ತರ್‌ಬಿಯತ್‌ರಿಂದ ಇಸ್ಲಾಹೀ ಸಮಿತಿಯ ಕೆಲಸಗಳ ಬಗ್ಗೆ ಸಹ ಹುಝೂರ್ ರಿಪೋರ್ಟ್ ಕೇಳಿದರು. ಹುಝೂರ್ ಹೇಳಿದರು: ಇದು ಬಹಳ ಮುಖ್ಯ ಕೆಲಸವಾಗಿದೆ. ಸಮಸ್ಯೆಗಳು ವರ್ಧಿಸುತ್ತಿವೆ. ಆದ್ದರಿಂದ ಅದರ ಕಡೆಗೆ ವಿಶೇಷವಾದ ಗಮನಹರಿಸಿರಿ.

**(ಅಲ್‌ಫಝ್ಲ್ ಇಂಟರ್‌ನ್ಯಾಶನಲ್ 19/08/2005)**

## ನ್ಯಾಶನಲ್ ಮಜ್ಲಿಸೆ ಆಮಿಲ ಡೆನ್ಮಾರ್ಕ್‌ನೊಂದಿಗೆ ಮೀಟಿಂಗ್

ಸೆಕ್ರಿಟರಿ ತರ್‌ಬಿಯತ್‌ಗೆ ನಿರ್ದೇಶನ ಕೊಡುತ್ತಾ ಹುಝೂರ್ ಹೇಳಿದರು: ಎಲ್ಲಿಯವರೆಗೆ ಕುಟುಂಬಗಳೊಂದಿಗೆ ವೈಯಕ್ತಿಕ ಸಂಪರ್ಕ ಉಂಟಾಗುವುದಿಲ್ಲವೋ, ಜನರೊಂದಿಗೆ ಸಂಪರ್ಕ ಉಂಟಾಗುವುದಿಲ್ಲವೋ ಅಲ್ಲಿಯವರೆಗೆ ತರಬೇತಿಯ ಫಲಿತಾಂಶಗಳು ಲಭಿಸಲಿಕ್ಕಿಲ್ಲ. ಯಾರಿಗೆ ಮೊದಲಿನಿಂದಲೇ ಜಮಾಅತಿನೊಂದಿಗೆ ಸಂಬಂಧ ಮತ್ತು ಸಂಪರ್ಕವಿರುತ್ತದೋ ಅವರೇ ಮಸೀದಿಗೆ ಬರುವವರಾಗಿರುತ್ತಾರೆ. ಮಸೀದಿಗೆ ಬರದವರನ್ನು ಹೇಗೆ ಮಸೀದಿಗೆ ತರಬೇಕೆಂದು ನೋಡಬೇಕಾಗಿದೆ. ಅವರಿಗಾಗಿ ಪ್ರೋಗ್ರಾಮ್ ಮಾಡಬೇಕು. ಇಂತಹ ಜನರನ್ನು ಮರಳಿ ತರಲು ಮಜ್ಲಿಸೆ ಆಮಿಲ ಒಟ್ಟು ಸೇರಿ, ಕುಳಿತು, ಯೋಚಿಸಿ ಪ್ರೋಗ್ರಾಮ್ ಮಾಡಬೇಕು ಮತ್ತು ಅದರ ಪ್ರಕಾರ ನಡೆದ ಕೆಲಸಗಳ ರಿಪೋರ್ಟ್ ಬರಬೇಕು.

ಹುಝೂರ್ ಹೇಳಿದರು: ನಿಮ್ಮ ಬಳಿಯಲ್ಲಿರುವ ಜನರ ಸಂಖ್ಯೆ ಕಡಿಮೆ ಆಗಿರುವುದರಿಂದ ಯಾರಾದರೂ ಹಿಂದೆ ಸರಿದಿದ್ದರೆ ಬೇಗನೆ ಗೊತ್ತಾಗುವುದು. ಅವರನ್ನು ತರಬೇಕು. ಅವರ ಅಭಿರುಚಿ ಪ್ರಕಾರದ ಕಾರ್ಯಕ್ರಮವನ್ನು ಮಾಡಿ ಅವರನ್ನು ಸಮೀಪ ತರಲು ಪ್ರಯತ್ನಿಸಬೇಕಾಗಿದೆ. ಇಂತಹ ದುರ್ಬಲ ಕುಟುಂಬಗಳನ್ನು ಹೇಗೆ ನಿಮ್ಮೊಂದಿಗೆ ಸೇರಿಸುವುದು ಎಂಬುದರ ಕುರಿತು ಯುವಕರು ತಮ್ಮ ಪ್ರೋಗ್ರಾಮ್ ಮಾಡಲಿ ಮತ್ತು ಲಜ್‌ನಾ ತಮ್ಮ ಕಾರ್ಯಕ್ರಮಗಳನ್ನು ಮಾಡಲಿ.

ಹುಝೂರ್ ಹೇಳಿದರು: ಹುದ್ದೇದಾರರು ತಮ್ಮ ಅವಲೋಕನ ಸಹ ಮಾಡಲಿ. ತಮ್ಮ ಮನೆಯಲ್ಲಿಯೇ ತಾವು ಸರಿಯಾಗಿದ್ದರೆ

ಅನುಗ್ರಹಗಳು ಮನೆಗಳಿಂದ ಬರುವುವು. ತಮ್ಮ ಮನೆಯಲ್ಲಿ ಸಹ ಅವಲೋಕನ ನಡೆಸಬೇಕು. ಇಲ್ಲಿ ಮಜ್ಲಿಸ್‌ಗಳ ಪ್ರೋಗ್ರಾಮ್ ಅಲ್ಲದೆ, ಯುವಕರಿಗೆ ಅಭಿರುಚಿ ಹುಟ್ಟಿಸುವ ಕಾರ್ಯಕ್ರಮಗಳು ನಡೆಯಬೇಕು. ಅಲೋಚನೆಗಳನ್ನೂ ಅಭಿಪ್ರಾಯಗಳನ್ನೂ ವ್ಯಕ್ತಪಡಿಸಬಹುದಾದ ಯಾವುದಾದರೂ ವಿಷಯ ಆಯ್ಕೆ ಮಾಡಿರಿ, ಒಳಾಂಗಣ (ಇನ್‌ಡೋರ್) ಆಟ ಇತ್ಯಾದಿಗಳು ಇರುವ ಪ್ರೋಗ್ರಾಮ್ ನಡೆಯಲಿ. ಹುಝೂರ್ ಹೇಳಿದರು: ನೀವು ಉಪದೇಶಿಸಬಹುದು, ಆದರೆ ಕಠಿಣ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಉಪದೇಶಿಸುತ್ತಾ ಇರಿ. ಎಲ್ಲ ಅಹ್ಮದೀ ಮಕ್ಕಳ ತರಬೇತಿ ಮಾಡಬೇಕು. ತಮ್ಮ ಮನೆಯಿಂದ ತರಬೇತಿ ಪ್ರಾರಂಭಿಸಿರಿ. ಹುಝೂರ್ ಹೇಳಿದರು: ಸ್ಥಾಯಿಯಾದ ರೋಗವು ಇಂಟರ್‌ನೆಟ್ ಮತ್ತು ಸ್ವಭಾವಗಳನ್ನು ಕೆಡಿಸುವ ಟಿ.ವಿ. ಕಾರ್ಯಕ್ರಮಗಳು ಆಗಿವೆ. ತಂದೆ ತಾಯಂದಿರು ಮನೆಯಲ್ಲಿ ಸಮಯ ಕೊಡದಿದ್ದರೆ ಮಕ್ಕಳು ಹೊರಗೆ ಹೋಗಿ ನೆಮ್ಮದಿ ಹುಡುಕುತ್ತಾರೆ. ಅನಂತರ ಕೆಟ್ಟ ಗೆಳೆಯರ ಸಹವಾಸವನ್ನು ಬೆಳೆಸುತ್ತಾರೆ. ಹುಝೂರ್ ಹೇಳಿದರು: ಈ ಸಮಾಜದಲ್ಲಿ ಇರಬೇಕಾದರೆ ಸಾಮಾನ್ಯ ಸ್ಥಿತಿಗಿಂತ ಅಧಿಕ ತ್ಯಾಗಗಳನ್ನು ಮಾಡಬೇಕಾಗುವುದು. ಮನೆಯಲ್ಲಿ ತರಬೇತಿ ನಡೆದರೆ, ತಂದೆ ತಾಯಂದಿರು ನಮಾಝ್ ಅನುಷ್ಠಿಸುವುದಾದರೆ, ಪವಿತ್ರ ಖುರ್‌ಆನ್ ತಿಲಾವತ್ ಮಾಡುವುದಾದರೆ ಮಕ್ಕಳು ಕೂಡ ಪ್ರಭಾವಿತರಾಗುವರು ಮತ್ತು ಅದೇ ರೀತಿ ಮಾಡುವರು.

**(ಅಲ್‌ಫಝ್ಲ್ ಇಂಟರ್‌ನ್ಯಾಶನಲ್ 21/10/2005)**

## ಮಜ್ಲಿಸೆ ಆಮಿಲ ಖುದ್ದಾಮುಲ್ ಅಹ್ಮದಿಯಾ ಸ್ವೀಡನ್‌ನೊಂದಿಗೆ ಮೀಟಿಂಗ್

ಹುಝೂರ್ ಮುಹ್ತಮಿಮ್ ತರ್‌ಬಿಯತ್‌ಗೆ ಹೇಳಿದರು: ನಮಾಝಿನ ಹಾಜರಿ ಕಡೆಗೆ ಶ್ರದ್ಧೆವಹಿಸಿರಿ. ಎಷ್ಟು ಖುದ್ದಾಮ್ ನಮಾಝ್ ಅನುಷ್ಠಿಸುತ್ತಾರೆ ಮತ್ತು ಎಷ್ಟು ಖುದ್ದಾಮ್ ಖುರ್‌ಆನ್ ತಿಲಾವತ್ ಮಾಡುತ್ತಾರೆ ಎಂದು ನಿಮಗೆ ಗೊತ್ತಿರಬೇಕು. ಮಸೀದಿಗೆ ಬರದವರಿಗೆ ಪ್ರೀತಿಯಿಂದ ತಿಳಿಹೇಳಿ ಕೊಡಬೇಕು. ನಿಮ್ಮ ಬಳಿ ಎಲ್ಲ ಡಾಟಾ (Data)

ಒಟ್ಟಿಗೆ ಇರಬೇಕು. ನಿಮ್ಮ ಮಾತುಗಳನ್ನು ಕೇಳದವರಿಗಾಗಿ ಅವರ ಸ್ನೇಹಿತರಲ್ಲಿ ಯಾರಿಗಾದರೂ ಅವರನ್ನು ಸಂಪರ್ಕಿಸುವ ಡ್ಯೂಟಿ ಕೊಟ್ಟು ಮಸೀದಿಯೊಂದಿಗೆ ಅವರ ಸಂಬಂಧ ಸ್ಥಾಪಿಸಿರಿ.

**(ಅಲ್‌ಫರ್‍ಝ್‌ಲ್ ಇಂಟರ್‌ನ್ಯಾಶನಲ್ 28/10/2005)**

## ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತದ ಮೀಟಿಂಗ್

ಮುಹ್ತಮಿಮ್ ತರ್‌ಬಿಯತ್‌ಗೆ ನಿರ್ದೇಶನ ನೀಡುತ್ತಾ ಹುಝೂರ್ ಹೇಳಿದರು: ನೀವು ನಿಮ್ಮ 800 ಮಜ್ಲಿಸ್‌ಗಳ ತರಬೇತಿ ಮಾಡಬೇಕಾಗಿದೆ. ನಿಮ್ಮ ಪ್ರೋಗ್ರಾಮಿನ ಅವಲೋಕನ ನಡೆಸಿರಿ. ನಿಮ್ಮ ತರಬೇತಿ ಕಾರ್ಯಚಟುವಟಿಕೆಗಳ ರೂಪರೇಷೆಯನ್ನು (ಲಾಇಹೆ ಅಮಲ್) ನೋಡಿರಿ. ಎಷ್ಟು ಖುದ್ದಾಮ್ ನಮಾಝ್ ಅನುಷ್ಠಿಸುತ್ತಿದ್ದಾರೆ ಎಂದು ನೋಡಿರಿ. ನಿಮ್ಮ ಮಜ್ಲಿಸ್‌ಗಳ ತರ್‌ಬಿಯತ್ ವಿಭಾಗದಲ್ಲಿ ಇದರ ಪ್ರಸ್ತಾಪ ಇರಬೇಕು ಮತ್ತು ಅದರ ರಿಪೋರ್ಟ್ ಬರಬೇಕು.

ಹುಝೂರ್ ಹೇಳಿದರು: ಫಜ್‌ರ್ ಮತ್ತು ಇಶಾ ನಮಾಝಿನಲ್ಲಿ ಎಷ್ಟು ಖುದ್ದಾಮ್ ಬರುತ್ತಾರೆ ಎಂಬುದರ ಸಹ ರಿಪೋರ್ಟ್ ಮಜ್ಲಿಸ್‌ಗಳಿಂದ ತರಿಸಿರಿ. ಐದು ಹೊತ್ತಿನ ನಮಾಝ್ ಅನುಷ್ಠಿಸುವವರು ಎಷ್ಟು?, ಮಸೀದಿಗೆ ಬಂದು ಅನುಷ್ಠಿಸುವವರು ಎಷ್ಟು?, ಪವಿತ್ರ ಖುರ್‌ಆನ್ ತಿಲಾವತ್ ಮಾಡುವವರು ಎಷ್ಟು?, ವಸಿಯ್ಯತ್ ವ್ಯವಸ್ಥೆಯಲ್ಲಿ ಸೇರಿದವರು ಎಷ್ಟು? ಇವೆಲ್ಲ ರಿಪೋರ್ಟ್ ನಿಮ್ಮ ಬಳಿ ಇರಬೇಕು.

**(ಅಲ್‌ಫರ್‍ಝ್‌ಲ್ ಇಂಟರ್‌ನ್ಯಾಶನಲ್ 03/03/2006)**

## ನ್ಯಾಶನಲ್ ಮಜ್ಲಿಸೆ ಆಮಿಲ ಸಿಂಗಪೂರ್‌ನೊಂದಿಗೆ ಮೀಟಿಂಗ್

ಹುಝೂರ್ ಸೆಕ್ರೆಟರಿ ತರ್‌ಬಿಯತ್‌ನೊಡನೆ ಕೇಳಿದರು: ಮಸೀದಿಗೆ ಬರುವ ವ್ಯಕ್ತಿಗಳ ತರಬೇತಿಗಾಗಿ ಕಾರ್ಯಕ್ರಮಗಳು ನಡೆಯುತ್ತವೆ. ಆದರೆ ಮಸೀದಿಗೆ ಬರದವರ, ಸಂಪರ್ಕವಿರಿಸದವರ ತರಬೇತಿಗಾಗಿ ಯಾವ ಪ್ರೋಗ್ರಾಮ್ ಮಾಡಲಾಗಿದೆ? ಹುಝೂರ್

ಹೇಳಿದರು: ಅವರ ತರಬೇತಿಗಾಗಿ ಸಹ ಪ್ರೋಗ್ರಾಮ್ ಮಾಡಿರಿ. ಅಹ್ಮದಿಯಾಗಿದ್ದ ಪೂರ್ವಿಕರ ಮಕ್ಕಳು ಸಂಪರ್ಕ ಇರಿಸುತ್ತಿಲ್ಲವಾದರೆ ಅವರೊಂದಿಗೆ ಸಂಪರ್ಕವಿರಿಸಿರಿ. ಅವರನ್ನು ಮಸೀದಿಗೆ ತನ್ನಿರಿ. ಅನಂತರ ಈ ಸಂಪರ್ಕವನ್ನು ಸ್ಥಾಯಿಯಾಗಿ ಉಳಿಸಿರಿ.

**(ಅಲ್‌ಫಝ್ಲ್ ಇಂಟರ್‌ನ್ಯಾಶನಲ್ 28/04/2006)**

## ನ್ಯಾಶನಲ್ ಮಜ್ಲಿಸೆ ಆಮಿಲ ಇಂಡೋನೇಶಿಯದೊಂದಿಗೆ ಮೀಟಿಂಗ್

ಸೆಕ್ರೆಟರಿ ತರ್‌ಬಿಯತ್‌ನೊಡನೆ ಹುಝೂರ್ ಕೇಳಿದರು: ನಿಮ್ಮ ವಾರ್ಷಿಕ ಕಾರ್ಯಕ್ರಮಗಳೇನು? ತರಬೇತಿಯ ಕಡೆಗೆ ತುಂಬಾ ಗಮನ ಹರಿಸಿರಿ.

ಹುಝೂರ್ ಕೇಳಿದರು: ದೇಶದಲ್ಲಿರುವ ನಮ್ಮ ಮಸೀದಿಗಳಿಂದ, ಸೆಂಟರ್‌ಗಳಿಂದ ಅಹ್ಮದಿಗಳು ಎಷ್ಟು ದೂರದಲ್ಲಿ ಇದ್ದಾರೆ? ಇದಕ್ಕೆ ಉತ್ತರವಾಗಿ ಹುಝೂರಿಗೆ ಹೀಗೆ ಹೇಳಲಾಯಿತು: ಹಳ್ಳಿಗಳಲ್ಲಿ ಸೆಂಟರ್‌ಗಳ ಸಮೀಪದಲ್ಲಿ ಇರುವರು. ಆದರೆ ಪಟ್ಟಣಗಳಲ್ಲಿ ಸೆಂಟರ್‌ಗಳಿಂದ ಬೇರೆ ಬೇರೆ ದೂರದಲ್ಲಿರುವರು. ಹುಝೂರ್ ಕೇಳಿದರು: ಯಾವ ನಮಾಝಿನಲ್ಲಿ ಹಾಜರಿ ಹೆಚ್ಚಿರುತ್ತದೆ ಮತ್ತು ಶೇಕಡ ಎಷ್ಟು ಜನರು ಬರುತ್ತಾರೆ? ಹುಝೂರ್ ಹೇಳಿದರು: ನಿಮಗೆ ನಿಯತವಾಗಿ ನಮಾಝಿನ ಹಾಜರಿಯ ರಿಪೋರ್ಟ್ ಕೊಡಲು ಪ್ರತಿ ಜಮಾಅತಿನ ಸೆಕ್ರೆಟರಿ ತರ್‌ಬಿಯತ್‌ಗೆ ಹೇಳಿರಿ.

**(ಅಲ್‌ಫಝ್ಲ್ ಇಂಟರ್‌ನ್ಯಾಶನಲ್ 05/05/2006)**

18/04/2006

## ನ್ಯಾಶನಲ್ ಮಜ್ಲಿಸೆ ಆಮಿಲ ಖುದ್ದಾಮುಲ್ ಅಹ್ಮದಿಯಾ ಆಸ್ಟ್ರೇಲಿಯಾದೊಂದಿಗೆ ಮೀಟಿಂಗ್

ಮುಹ್ತಮಿಮ್ ತರ್‌ಬಿಯತ್‌ನೊಡನೆ ಹುಝೂರ್ ಕೇಳಿದರು: ಖುದ್ದಾಮರ ಒಟ್ಟು ಸಂಖ್ಯೆಯಲ್ಲಿ ಎಷ್ಟು ಖುದ್ದಾಮ್ ಐದು ಹೊತ್ತಿನ ನಮಾಝ್ ಅನುಷ್ಠಿಸುತ್ತಾರೆ? ಎಷ್ಟು ಜನರು ಜಮಾಅತಾಗಿ ಅನುಷ್ಠಿಸುತ್ತಾರೆ. ಪ್ರತಿ ಮಜ್ಲಿಸಿನಲ್ಲಿ ಮಸೀದಿಯಲ್ಲದೆ ಬೇರೆ ನಮಾಝ್ ಸೆಂಟರ್‌ಗಳು ಸಹ ಇವೆಯೇ? ಹುಝೂರ್ ನಿರ್ದೇಶಿಸಿದರು: ನಮಾಝಿಗೆ ಬರದ ದುರ್ಬಲ ಖುದ್ದಾಮರನ್ನು ಮಸೀದಿಗೆ ತರಲು ಕ್ರಿಯಾಶೀಲ(Active) ಖುದ್ದಾಮರನ್ನು ಅವರೊಂದಿಗೆ ಸೇರಿಸಿರಿ. ಅವರನ್ನು ನಮಾಝ್ ಅನುಷ್ಠಿಸುವವರನ್ನಾಗಿ ಮಾಡಿಸುವ ಖುದ್ದಾಮ್ ಅವರು ಆಗಿರಬೇಕು. ಅವರೊಂದಿಗೆ ಸೇರಿ ಸ್ವತಃ ನಮಾಝ್ ಉಪೇಕ್ಷಿಸುವ ಖುದ್ದಾಮ್ ಆಗಿರಬಾರದು.

ಹುಝೂರ್ ಮುಹ್‌ತಮಿಮ್ ತರ್‌ಬಿಯತ್‌ನೊಡನೆ ಕೇಳಿದರು: ಎಂ.ಟಿ.ಎ ಮೂಲಕ ಎಷ್ಟು ಖುದ್ದಾಮ್ ಖುತ್‌ಬ ಕೇಳುತ್ತಾರೆ? ಅವಲೋಕಿಸಿದ ನಂತರ ಹುಝೂರ್ ಹೇಳಿದರು: ಖುತ್‌ಬ ಕೇಳದವರಿಗಾಗಿ ಪ್ಲಾನ್ ಮಾಡಿರಿ. ಹುಝೂರ್ ಕೇಳಿದರು: ಪವಿತ್ರ ಖುರ್‌ಆನ್ ಓದುವ ಖುದ್ದಾಮರ ಒಟ್ಟು ಸಂಖ್ಯೆ ಎಷ್ಟು? ಪವಿತ್ರ ಖುರ್‌ಆನ್ ನಿಯತವಾಗಿ (Regular) ಓದದ ಖುದ್ದಾಮರ ಒಟ್ಟು ಸಂಖ್ಯೆ ಎಷ್ಟು? ಒಂದು ತಿಂಗಳಲ್ಲಿ 15 ದಿನ ಪವಿತ್ರ ಖುರ್‌ಆನ್ ಓದುವವರೆಷ್ಟು?

ಹುಝೂರ್ ಹೇಳಿದರು: ತಿಲಾವತ್ ಮಾಡದವರು ಕನಿಷ್ಠ ಪಕ್ಷ 15 ದಿನ ತಿಲಾವತ್ ಮಾಡುವವರಾಗಲಿ. ತಿಂಗಳಲ್ಲಿ 15 ದಿನ ಪವಿತ್ರ ಖುರ್‌ಆನ್ ಪಾರಾಯಣ ಮಾಡುವರಲ್ಲಿ ಸ್ಥಾಯಿಯಾಗಿ ತಿಲಾವತ್ ಮಾಡುವ ಅಭ್ಯಾಸ ಉಂಟಾಗುವುದು. ಕೇಂದ್ರೀಯ ಮಜ್ಲಿಸೆ ಆಮಿಲದಿಂದಲೂ ಜಮಾಅತಾಗಿ ನಮಾಝ್ ಅನುಷ್ಠಿಸವವರ ಸಂಖ್ಯೆಯನ್ನು ಹುಝೂರ್ ಅವಲೋಕಿಸಿದರು. ಹುಝೂರ್ ಹೇಳಿದರು: ಆಮಿಲದ ಮೆಂಬರ್ ಕಡಿಮೆ ಪಕ್ಷ ದಿನದಲ್ಲಿ ಒಂದು ನಮಾಝ್ ಜಮಾಅತಾಗಿ ಅನುಷ್ಠಿಸುವುದಿಲ್ಲ ಎಂದಾದರೆ ಅವರು ಇತರರನ್ನು ಹೇಗೆ

ಉಪದೇಶಿಸುವರು? ಹುಝೂರ್ ಆಮಿಲದ ಮೆಂಬರರೊಂದಿಗೆ ಕೇಳಿದರು: ನಿಯತವಾಗಿ ತಿಲಾವತ್ ಮಾಡುವವರು ನಿಮ್ಮಲ್ಲಿ ಎಷ್ಟಿದ್ದಾರೆ? ದಿನಾಲೂ ತಿಲಾವತ್ ಮಾಡುವ ಅಭ್ಯಾಸ ಮಾಡಿರಿ. ದೂರ ಸರಿದಿರುವ ಖುದ್ದಾಮರನ್ನು ಅವರ ಗೆಳೆಯರ ಮೂಲಕ ಸಮೀಪ ತರುವ ಪ್ರಯತ್ನ ಮಾಡಿರಿ.

**(ಅಲ್‌ಫಝ್ಲ್ ಇಂಟರ್‌ನ್ಯಾಶನಲ್ 26/05/2006)**

ಎಪ್ರಿಲ್ 18, 2006

## ನ್ಯಾಶನಲ್ ಮಜ್ಲಿಸೆ ಆಮಿಲ ಆಸ್ಟ್ರೇಲಿಯಾದೊಂದಿಗೆ ಮೀಟಿಂಗ್

ಸೆಕ್ರೆಟರಿ ತರ್‌ಬಿಯತ್‌ನೊಡನೆ ಹುಝೂರ್ ಕೇಳಿದರು: ಒಂದು ವರ್ಷದ ನಿಮ್ಮ ತರಬೇತಿ ಪ್ರೋಗ್ರಾಮ್ ಏನು? ಹಿಂದೆ ಸರಿದವರ ಏನು ತರ್‌ಬಿಯತ್ ಮಾಡುತ್ತಿದ್ದೀರಿ? ಅವರಿಗಾಗಿ ಏನು ಪ್ರೋಗ್ರಾಮ್ ಮಾಡಿದ್ದೀರಿ. ಅವರೊಂದಿಗೆ ಸಂಪರ್ಕವಿರಿಸಲು ಏನು ಮಾಡುತ್ತಿದ್ದೀರಿ? ಹುಝೂರ್ ಹೇಳಿದರು: ಹುದ್ದೇದಾರರು ಎಂಬ ನೆಲೆಯಲ್ಲಿ ಒಂದು ಸಂಬಂಧವಿದೆ. ಸಹೋದರ, ಸ್ನೇಹಿತ ಎಂಬ ನೆಲೆಯಲ್ಲಿ ಒಂದು ಸಂಬಂಧವಿದೆ. ಮುಬಲ್ಲಿಗ್, ಅಮೀರ್ ಅಥವಾ ಸೆಕ್ರೆಟರಿ ತರ್‌ಬಿಯತ್ ಸ್ವತಃ ಇಂತಹ ಜನರನ್ನು ಭೇಟಿಯಾಗಲು ಹೋಗಬೇಕೆಂದಿಲ್ಲ. ಇಂತಹ ಜನರನ್ನು ವಾಪಸ್ಸು ತರಲು, ಅವರೊಂದಿಗೆ ಸಂಪರ್ಕವಿರಿಸಲು ಯಾರ ಸಹಾಯ ಪಡೆಯಬಹುದು ಎಂದು ನೀವು ನೋಡಿರಿ.

ಸೆಕ್ರೆಟರಿ ತರ್‌ಬಿಯತ್‌ಗೆ ನಿರ್ದೇಶನ ಕೊಡುತ್ತಾ ಹುಝೂರ್ ಕೇಳಿದರು: ಪರ್ದಾದ ಬಗ್ಗೆ ಗಮನಹರಿಸುವುದು ಲಜ್‌ನಾ ಇಮಾಇಲ್ಲಾಹ್‌ದ ಮಾತ್ರ ಕೆಲಸವಲ್ಲ. ಅದು ಪುರುಷರ ಸಹ ಕೆಲಸವಾಗಿದೆ. ಇಲ್ಲಿ ಬಂದು ಕೆಲವು ಸ್ತ್ರೀಯರು ಪರ್ದಾ ಕಡಿಮೆ ಮಾಡಿದ್ದಾರೆ. ಸಮಂಜಸವಲ್ಲದ ವಸ್ತ್ರ ಧರಿಸಲು ತೊಡಗಿದ್ದಾರೆ. ಇದರಲ್ಲಿ ತಪ್ಪು ಪುರುಷರದ್ದಾಗಿದೆ. ಪುರುಷರು ಪರಿಪೂರ್ಣ ಅನುಮತಿ ನೀಡಿರುತ್ತಾರೆ. ಮಾತ್ರವಲ್ಲ ಸ್ವತಃ ಕೀಳರಿಮೆಗೆ ತುತ್ತಾಗಿದ್ದಾರೆ.

ಹುಝೂರ್ ಹೇಳಿದರು: ಇಂತಹ ಸಂಗತಿಗಳಲ್ಲಿ ಪುರುಷರು ತಿಳಿ ಹೇಳಬೇಕು. ಹುಝೂರ್ ಹೇಳಿದರು: ಮುಲಾಖಾತಿನ ಸಂದರ್ಭದಲ್ಲಿ

ನಾನು ಅವಲೋಕಿಸಿದ್ದೇನೆ. "ನಮ್ಮೊಂದಿಗೆ ಬಜಾರಿನಲ್ಲಿ ತಿರುಗಾಡಲು ಪುರುಷರು ನಾಚಿಕೆ ಪಡುತ್ತಾರೆ" ಎಂದು ಹಲವು ಸ್ತ್ರೀಯರು ಹೇಳಿದ್ದಾರೆ. ಹುಝೂರ್ ಹೇಳಿದರು: ಪರ್ದಾ ಉನ್ನತಿಯ ಕಡೆಗೆ ಹೋಗಬೇಕು. ಕಡಿಮೆಯಾಗಬಾರದು. ಹುಝೂರ್ ಹೇಳಿದರು: ನೀವು ಅವರ ಹಿತಕಾಂಕ್ಷಿ ಯಾಗಿದ್ದೀರಿ ಎಂದು ಅವರಲ್ಲಿ ಪ್ರತಿಯೊಬ್ಬರಿಗೆ ಅನುಭವವಾಗಬೇಕು. ಸಮಾಜದಲ್ಲಿ ಅವನತಿ ಉಂಟಾಗಬಾರದು. ಒಂದು ಮಟ್ಟಕ್ಕೆ ತಲುಪಿದ ನಂತರ ಹೆಜ್ಜೆ ಮುಂದಕ್ಕೆ ಹೋಗಬೇಕು.

ಹುಝೂರ್ ಹೇಳಿದರು: ನಗ್ನತೆ ಮರೆಸುವುದನ್ನು ಮನುಷ್ಯನು ಇಷ್ಟಪಡುತ್ತಾನೆ. ಧರಿಸುವ ವಸ್ತ್ರ ಸಭ್ಯವಾಗಿರಬೇಕು. ಪಾಕಿಸ್ತಾನದಿಂದ ಬಂದಿರುವ ಬುರ್‌ಖಾ ಧರಿಸುತ್ತಿದ್ದ ಹೆಂಗಸರು ಬುರ್ಖಾ ಉಪೇಕ್ಷಿಸಿದರೆ ಬುರ್ಖಾ ಧರಿಸುವುದನ್ನು ನಿಲ್ಲಿಸದಿರಿ ಎಂದು ಅವರಿಗೆ ತಿಳಿ ಹೇಳಬೇಕು. ಸೌಮ್ಯವಾಗಿ ಹೇಳಿಕೊಡಿರಿ ಮತ್ತು ಶ್ರದ್ದೆ ವಹಿಸಿರಿ.

ಹುಝೂರ್ ಹೇಳಿದರು: ನಮಾಝಿಗೆ ಬರದವರನ್ನು ಮಸೀದಿಗೆ ತರುವುದು ಸಹ ಆವಶ್ಯಕ. ಪ್ರತಿ ಆರನೇ ಖುತ್‌ಬ ತರಬೇತಿಯ ಬಗ್ಗೆಯಾಗಿರಬೇಕು. ನಾಲ್ಕನೇ ಖುತ್‌ಬ ಧನತ್ಯಾಗ ಮತ್ತು ಆರಾಧನೆಯ ಬಗ್ಗೆ ಆಗಿರಬೇಕು. ( ಪುಟ 28 ನೋಡಿರಿ)

**(ಅಲ್‌ಫಝ್ಲ್ ಇಂಟರ್‌ನ್ಯಾಶನಲ್ 26/05/2006)**

03/05/2006

## ನ್ಯಾಶನಲ್ ಮಜ್ಲಿಸೆ ಆಮಿಲ ಫಿಜಿಯೊಂದಿಗೆ ಮೀಟಿಂಗ್

ತರ್‌ಬಿಯತ್ ಸೆಕ್ರಿಟರಿಯಿಂದ ಅವರ ಪ್ರೋಗ್ರಾಮು ಗಳನ್ನು ಅವಲೋಕಿಸಿ ಹುಝೂರ್ ಹೀಗೆ ನಿರ್ದೇಶಿಸಿದರು: ಜಮಾಅತಾದ ನಮಾಝಿನ ಕಡೆಗೆ ಶ್ರದ್ಧೆವಹಿಸಿರಿ. ಎಷ್ಟು ಜನರು ಬರುತ್ತಾರೆ ಮತ್ತು ಐದು ಹೊತ್ತಿನ ನಮಾಝಿನ ಹಾಜರಿ ಹೇಗಿರುತ್ತದೆ ಎಂದು ನೀವು ನೋಡಬೇಕು. ನಮಾಝಿನ ಹಾಜರಿಯನ್ನು ವರ್ಧಿಸಿರಿ. ಮುಂಚೆ ನಮಾಝಿಗೆ ಬರುತ್ತಿದ್ದವರು ಈಗ ಬರುತ್ತಿಲ್ಲವಾದರೆ ಅದಕ್ಕೆ ಕಾರಣವೇನೆಂದು ತಿಳಿಯಿರಿ. ಎಲ್ಲ ಜಮಾಅತುಗಳ ಗಮನ ಇದರ ಕಡೆಗೆ ಹರಿಸಬೇಕು. ನೀವು ಮಾಡುತ್ತಿರುವ ಪ್ರಯತ್ನದ ಫಲಿತಾಂಶ

ಜಮಾಅತುಗಳಿಂದ ತಿಳಿದು ಬರುವುದಿಲ್ಲವಾದರೆ, ನಿಮಗೆ ನಿಮ್ಮ ಮುಂದಿನ ಪ್ರೋಗ್ರಾಮ್ ಮಾಡಲಿಕ್ಕೆ ಸಾಧ್ಯವಿಲ್ಲ.

ಹುಝೂರ್ ಹೇಳಿದರು: ಒಂದು ಮುಖ್ಯ ಕೆಲಸ ಪವಿತ್ರ ಖುರ್‌ಆನ್ ಓದುವುದರ ಕುರಿತಾಗಿದೆ. ಎಷ್ಟು ಖುದ್ದಾಮ್ ಪವಿತ್ರ ಖುರ್‌ಆನ್ ನಿಯತವಾಗಿ ಓದುತ್ತಾರೆ ಎಂದು ನೋಡಬೇಕು. ಇದು ಸಹ ಸೆಕ್ರಿಟರಿ ತರ್‌ಬಿಯತಿನ ಕೆಲಸವಾಗಿದೆ. ಮಾಡಬೇಕಾದ ಸಂಗತಿಗಳೇನು, ಮಾಡಬಾರದ ಸಂಗತಿಗಳೇನು ಎಂದು ಪವಿತ್ರ ಖುರ್‌ಆನ್ ಓದಿದರೆ ಗೊತ್ತಾಗುವುದು.

ಹುಝೂರ್ ಹೇಳಿದರು: ಸೀರತುನ್ನಬಿ ಜಲಸಾದಲ್ಲಿ ಅಹ್ಮದಿಯೇತರರನ್ನು ಆಮಂತ್ರಿಸಬೇಕು. ಪ್ರತಿ ಜಮಾಅತಿನಲ್ಲಿ ಮಸೀದಿಯಲ್ಲಿ ನಮಾಝ್ ನಿರ್ವಹಿಸದವರು ಎಷ್ಟಿದ್ದಾರೆ ಎಂದೂ ಮನೆಯಲ್ಲಿ ಸಹ ನಮಾಝ್ ನಿರ್ವಹಿಸದವರು ಎಷ್ಟಿದ್ದಾರೆ ಎಂದೂ ಬಹಳ ಗಹನವಾಗಿ ಅವಲೋಕಿಸಬೇಕು. ಅನಂತರ ಅವರ ತರಬೇತಿಗಾಗಿ ಪ್ರೋಗ್ರಾಮ್ ಮಾಡಿರಿ. ಮನೆಯಲ್ಲಿ ಸಹ ನಮಾಝ್ ನಿರ್ವಹಿಸದವರನ್ನು ಕಡಿಮೆ ಪಕ್ಷ ಮನೆಯಲ್ಲಿ ನಮಾಝ್ ನಿರ್ವಹಿಸುವಂತೆ ಮಾಡಿರಿ. ಇದು ಮುರಬ್ಬಿ ಮತ್ತು ಸೆಕ್ರಿಟರಿ ತರಬೇತಿಯ ಕೆಲಸವಾಗಿದೆ. ತರಬೇತಿಯ ಕಡೆಗೆ ಜಮಾಅತಿನ ಸ್ತ್ರೀಯರಿಗೂ ಗಮನವಿಲ್ಲ. ಸ್ತ್ರೀಯರಲ್ಲಿ ಕೆಲವರಿಗೆ ನಮಾಝಿನ ಪ್ರಾಮುಖ್ಯತೆ ಗೊತ್ತಿಲ್ಲ. ಅವರು ತಮ್ಮ ಮಕ್ಕಳಿಗೆ ಹೇಗೆ ಕಲಿಸುವರು? ತಾಯಂದಿರು ಮಕ್ಕಳ ತರಬೇತಿ ಮಾಡಬೇಕಾಗಿದೆ. ತಂದೆಯಂದಿರು ತಮ್ಮ ಕೆಲಸಗಳ ಕಾರಣ ಮನೆಯಿಂದ ಹೊರಗೆ ಇರುತ್ತಾರೆ. ಕೇಂದ್ರೀಯ (ಮರ್ಕಝಿ) ಜಲಸದಲ್ಲಿ ತರಬೇತಿಗೆ ಸಂಬಂಧಿಸಿದ ಕಾರ್ಯಕ್ರಮಗಳೂ ವಿಷಯಗಳೂ ಇರಬೇಕು. ಪುರುಷರು ಸ್ವತಃ ನಮಾಝ್ ಅನುಷ್ಠಿಸಬೇಕು. ತಮ್ಮ ಸ್ತ್ರೀಯರನ್ನು ಸಹ ನಮಾಝ್ ನಿರ್ವಹಿಸುವಂತೆ ಮಾಡಬೇಕು. ತಮ್ಮ ಮಕ್ಕಳನ್ನು ನಮಾಝ್ ನಿರ್ವಹಿಸುವಂತೆ ಮಾಡಬೇಕು. ಸ್ವತಃ ಪವಿತ್ರ ಖುರ್‌ಆನ್ ಪಾರಾಯಣ ಮಾಡಿರಿ. ಮನೆಯಲ್ಲಿ ನಿಮ್ಮ ಸ್ತ್ರೀಯರು ತಿಲಾವತ್ ಮಾಡಲಿ. ನಿಮ್ಮ ಮಕ್ಕಳು ತಿಲಾವತ್ ಮಾಡಲಿ.

ಹುಝೂರ್ ಹೇಳಿದರು: ಇಲ್ಲಿ ತರಬೇತಿ ವಿಷಯಗಳ ಹಲವು ಸಮಸ್ಯೆಗಳು ಇವೆ. ಗಂಡ ಹೆಂಡತಿಯರ ಪರಸ್ಪರ ಸಂಬಂಧ

ಉತ್ತಮವಾಗಿರಬೇಕು. ವಿವಾಹಗಳು ನಡೆದ ಮೇಲೆ ವಿಚ್ಛೇದನಗಳು ನಡೆಯುತ್ತಿವೆ. ತರಬೇತಿಯ ಈ ಸಮಸ್ಯೆಗಳನ್ನು ಪರಿಹರಿಸಬೇಕು. ಯಾರ ಮೇಲಾದರೂ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುದಾಗಿ ಘೋಷಿಸಲ್ಪಟ್ಟರೆ ಲಜ್ಜಿತರಾಗುತ್ತಾರೆ. ಈ ಎಲ್ಲ ತರಬೇತಿಯ ಸಮಸ್ಯೆಗಳನ್ನು ಪರಿಹರಿಸುವುದು ಅಮೀರ್, ಮುಬಲ್ಲಿಗ್ ಮತ್ತು ತರಬೇತಿಯ ಎಲ್ಲ ಸೆಕ್ರಿಟರಿಗಳ ಕೆಲಸವಾಗಿದೆ. ತರಬೇತಿ ನಡೆದರೆ ತಪ್ಪುಗಳು ಸಹ ಆಗಲಿಕ್ಕಿಲ್ಲ. ನಾಚಿಕೆಗೇಡು ಸಹ ಅನುಭವಿಸಬೇಕಾಗಿಲ್ಲ.

**(ಅಲ್‌ಫಝ್ಲ್ ಇಂಟರ್‌ನ್ಯಾಶನಲ್ 16/06/2006)**

7/5/2016

## ನ್ಯಾಶನಲ್ ಮಜ್ಲಿಸೆ ಆಮಿಲ ಅನ್ಸಾರುಲ್ಲಾಹ್ ನ್ಯೂಝಿಲೇಂಡ್‌ನೊಂದಿಗೆ ಮೀಟಿಂಗ್

ಖಾಯಿದ್ ತರ್‌ಬಿಯತ್‌ನೊಡನೆ ಹುಝೂರ್ ಕೇಳಿದರು: ನಿಮ್ಮ ಯೋಜನೆ ಮತ್ತು ಪ್ರೋಗ್ರಾಮ್ ಏನು? ಎಷ್ಟು ಅನ್ಸಾರ್ ನಿಯತವಾಗಿ ಜಮಾಅತಾಗಿ ನಮಾಝ್ ನಿರ್ವಹಿಸುತ್ತಾರೆ, ಎಷ್ಟು ಅನ್ಸಾರ್ ದಿನಾಲೂ ತಿಲಾವತ್ ಮಾಡುತ್ತಾರೆ, ಎಷ್ಟು ಅನ್ಸಾರ್ ತಮ್ಮ ಮಕ್ಕಳ ತರಬೇತಿ ಕಡೆಗೆ ಗಮನಹರಿಸುತ್ತಾರೆ ಎಂಬುದರ ರಿಕಾರ್ಡ್ ಇರಬೇಕು. ಮನೆಯಲ್ಲಿ ದೀನಿನ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸಲಾಮರ ಕುರಿತು ಮಾತುಕತೆ ನಡೆಸಬೇಕು, ಹಝ್ರತ್ ಮಸೀಹ್ ಮೌಊದ್ ಅಲೈಹಿಸಲಾಮರ ಗ್ರಂಥಗಳನ್ನು ಓದಿ ಹೇಳಬೇಕು, ಮನೆಯಲ್ಲಿ ಧಾರ್ಮಿಕವಾದ ವಾತಾವರಣವಿರಬೇಕು, ಮನೆಯಲ್ಲಿ ಮಕ್ಕಳು ನಮಾಝ್ ನಿರ್ವಹಿಸುವಂತೆಯೂ ಪವಿತ್ರ ಖುರ್‌ಆನ್ ಓದುವಂತೆಯೂ ಮಾಡಬೇಕು ಎಂಬೀ ಸಂಗತಿಗಳ ಕಡೆಗೆ ಅನ್ಸಾರರ ಗಮನ ಹರಿಸಬೇಕು.

ಹುಝೂರ್ ಹೇಳಿದರು: ನೀವು ಹೊಸ ಪೀಳಿಗೆಯನ್ನು ಕಾಪಾಡಬೇಕಾದರೆ, ಅವರ ಶಿಕ್ಷಣ ಮತ್ತು ತರಬೇತಿಗಾಗಿ ಯೋಜನೆಗಳನ್ನು ಮಾಡಬೇಕಾಗಿದೆ.

**(ಅಲ್‌ಫಝ್ಲ್ ಇಂಟರ್‌ನ್ಯಾಶನಲ್ 30/06/2006)**

07/05/2006

## ನ್ಯಾಶನಲ್ ಮಜ್ಲಿಸೆ ಆಮಿಲ ಖುದ್ದಾಮುಲ್ ಅಹ್ಮದಿಯಾ ನ್ಯೂಝಿಲೇಂಡ್‌ನೊಂದಿಗೆ ಮೀಟಿಂಗ್

ಮುಹ್ತಮಿಮ್ ತರ್‌ಬಿಯತ್‌ನೊಡನೆ ಅವರ ವಿಭಾಗದ ಕೆಳಗೆ ನಡೆಯುತ್ತಿರುವ ಕೆಲಸಗಳ ಬಗ್ಗೆ ಕೇಳಿದರು. ಹುಝೂರ್ ಹೇಳಿದರು: ಎಷ್ಟು ಖುದ್ದಾಮ್ ಐದು ಹೊತ್ತಿನ ನಮಾಝ್ ನಿರ್ವಹಿಸುತ್ತಾರೆ, ಎಷ್ಟು ಖುದ್ದಾಮ್ ಜಮಾಅತಾಗಿ ನಿರ್ವಹಿಸುತ್ತಾರೆ, ಎಷ್ಟು ಖುದ್ದಾಮ್ ತಿಲಾವತ್ ಮಾಡುತ್ತಾರೆ ಎಷ್ಟು ಖುದ್ದಾಮ್ ದಿನಾಲೂ ತಿಲಾವತ್ ಮಾಡುತ್ತಾರೆ ಎಂಬುದರ ಅರಿವು ನಿಮಗಿರಬೇಕು.

ಹುಝೂರ್ ಹೇಳಿದರು: ನಮಾಝ್ ಅನುಷ್ಠಿಸುವುದು, ಪವಿತ್ರ ಖುರ್‌ಆನ್ ಓದುವುದು ಇವುಗಳಾಗಿವೆ ಮುಖ್ಯವಾದ ಸಂಗತಿಗಳು. ತರಬೇತಿಗಾಗಿ ವಿವಿಧ ವಿಷಯಗಳ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಉಲ್ಲೇಖಗಳನ್ನು ಆಯ್ಕೆ ಮಾಡಿ ಖುದ್ದಾಮರಿಗೆ ಕೊಡಬೇಕು. ತಂದೆ ತಾಯಂದಿರಿಗೆ ನೀಡಬೇಕಾದ ಹಕ್ಕುಗಳು, ನೆರೆಹೊರೆಯವರಿಗೆ ಸಂಬಂಧಿಸಿದ ಹಕ್ಕುಗಳು, ಖಿದ್‌ಮತೆ ಖಲ್‌ಖ್‌ನ (ಜನರ ಸೇವೆ) ಕೆಲಸಗಳು, ನಮಾಝ್, ಪವಿತ್ರ ಖುರ್‌ಆನ್, ಧನತ್ಯಾಗ, ಸತ್ಯಸಂಧತೆ, ಕೋಪಗೊಳ್ಳದಿರುವುದು, ವಿಶ್ವಾಸಾರ್ಹತೆ ಮುಂತಾದ ವಿಷಯಗಳನ್ನು ಆಯ್ಕೆ ಮಾಡಿ ಖುದ್ದಾಮರಿಗೆ ಕೊಡಬೇಕು. ತರ್‌ಬಿಯತ್ ಮೀಟಿಂಗುಗಳಲ್ಲಿ ಅವುಗಳನ್ನು ಓದಬೇಕು ಮತ್ತು ಶೈಕ್ಷಣಿಕ ಸಿಲಬಸಾಗಿ (ತಅ್‌ಲೀಮಿ ನಿಸಾಬ್) ಸಹ ಅದು ಇರಬೇಕು.

ಹುಝೂರ್ ಮುಹ್ತಮಿಮ್ ತರಬೇತಿಗೆ ನಿರ್ದೇಶನ ನೀಡುತ್ತಾ ಹೇಳಿದರು: ಎಷ್ಟು ಖುದ್ದಾಮರಿಗೆ ನಮಾಝ್ ಗೊತ್ತಿದೆ, ಎಷ್ಟು ಖದ್ದಾಮರಿಗೆ ಅದರ ಅರ್ಥ ಗೊತ್ತಿದೆ, ಎಷ್ಟು ಖುದ್ದಾಮರಿಗೆ ಪವಿತ್ರ ಖುರ್‌ಆನ್ ಓದಲು ಗೊತ್ತಿದೆ ಎಂಬೀ ಎಲ್ಲ ವಿಷಯಗಳ ಅವಲೋಕನ ಮೊದಲು ನಡೆಸಬೇಕು. ಈ ಅವಲೋಕನ ತಯಾರಾದ ನಂತರ ನೀವು ತರಬೇತಿ ಮಾಡಬಹುದು ಮತ್ತು ಒಳ್ಳೆಯ ಕಾರ್ಯಕ್ರಮಗಳನ್ನು ಮಾಡಬಹುದು. ಕೆಲವು ಹುಡುಗರು ಅಹ್ಮದಿಯೇತರ ಹುಡುಗಿಯರನ್ನು ವಿವಾಹವಾಗುತ್ತಾರೆ. ಅದೇ ರೀತಿಯಲ್ಲಿ, ಕೆಲವು ಅಹ್ಮದಿ ಹುಡುಗಿಯರು ಹೊರಗಿನಿಂದ ವಿವಾಹವಾಗುತ್ತಾರೆ. ಎರಡು ಸ್ಥಿತಿಯಲ್ಲೂ ಸಂತತಿಗಳು

ಹಾಳಾಗುತ್ತವೆ. ಆದ್ದರಿಂದ ತರಬೇತಿ ವಿಭಾಗ ಬಹಳ ಚುರುಕು ಗೊಳ್ಳಬೇಕಾಗಿದೆ.

ಹುಝೂರ್ ಹೇಳಿದರು: ಎಲ್ಲ ಕೆಲಸಗಳ ನಡುವೆಯೂ ಐದು ಹೊತ್ತಿನ ನಮಾಝ್ ಕಡ್ಡಾಯವಾಗಿ ನಿರ್ವಹಿಸಬೇಕು. ಐದು ಹೊತ್ತಿನ ನಮಾಝ್ ನಿರ್ವಹಿಸುವವನ ತರಬೇತಿ ನಡೆಯುವುದು, ಪವಿತ್ರ ಖುರ್‌ಆನ್ ಓದುವವನನ್ನು ಸಹ ತರಬೇತಿ ಮಾಡಬಹುದು. ಅದೇ ರೀತಿಯಲ್ಲಿ ಮೀಟಿಂಗುಗಳಲ್ಲಿ ನಿಯತವಾಗಿ ಬರುವವರು, ಮಸೀದಿಯೊಂದಿಗೆ ಸಂಪರ್ಕವಿರುವವರ ತರಬೇತಿ ನಡೆಯುವುದು.

ಹುಝೂರ್ ಹೇಳಿದರು: ಪವಿತ್ರ ಖುರ್‌ಆನ್, ಹದೀಸ್ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಲ್ಲೇಖಗಳನ್ನು ಒಳಗೊಂಡ ಎರಡು ಪುಟದ ನೋಟೀಸ್ ತಿಂಗಳಲ್ಲಿ ಒಂದು ಪ್ರಕಟಿಸಿ ಖುದ್ದಾಮರಲ್ಲಿ ವಿತರಿಸಬೇಕು. ಅದರಲ್ಲಿ ವಿವಿಧ ವಿಷಯಗಳಲ್ಲಿ ತರಬೇತಿ ವಿಷಯಗಳೂ ಇರಬೇಕು. ಅದಕ್ಕನುಸಾರವಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಲ್ಲೇಖವನ್ನು ಆಯ್ಕೆ ಮಾಡಿರಿ.

ಹುಝೂರ್ ಹೇಳಿದರು: ಹಿಂದೆ ಸರಿದಿರುವ ಮತ್ತು ಸಂಪರ್ಕವಿರಿಸದ ಖಾದಿಮರನ್ನು ಅವರ ಯಾವುದಾದರೂ ಗೆಳೆಯರ ಮೂಲಕ ಸಮೀಪ ತನ್ನಿರಿ. ಹುದ್ದೇದಾರರು ಸ್ವತಃ ಹೋಗಿ ಸಂಪರ್ಕ ಮಾಡಬೇಕೆಂದಿಲ್ಲ. ಅವರು ಜಮಾಅತಿನ ವ್ಯವಸ್ಥೆಯೊಂದಿಗೆ ಸೇರಬೇಕು ಮತ್ತು ಮಸೀದಿಯೊಂದಿಗೆ ಅವರ ಸಂಪರ್ಕ ಇರಬೇಕು ಎಂಬುದಾಗಿರಬೇಕು ಯಥಾರ್ಥ ಉದ್ದೇಶ.

ಹುಝೂರ್ ಹೇಳಿದರು: ತ್ಯಾಗ ಮಾಡದೆ ಲೋಕದಲ್ಲಿ ಯಾವುದೇ ಸಮುದಾಯ ಅಭಿವೃದ್ಧಿ ಹೊಂದುವುದಿಲ್ಲ. ತ್ಯಾಗ ಮಾಡುವಾಗ ಅಭಿವೃದ್ಧಿ ಉಂಟಾಗುವುದು. ನೀವು ತ್ಯಾಗ ಮಾಡಬೇಕು. ಯೋಜನೆ ಮಾಡಿ ಕೆಲಸ ಮಾಡಿರಿ. ಆಮಿಲದ ಎಲ್ಲರೂ ಸೇರಿ ಕೆಲಸ ಹೇಗೆ ಮಾಡಬೇಕೆಂದು ಯೋಚಿಸಿ ಪರಿಹಾರ ಹುಡುಕಬೇಕು. ನಿರಂತರ ಸಂಪರ್ಕವಿರಿಸಬೇಕಾಗುವುದು. ಅಲ್ಲಾಹನೊಂದಿಗೆ ಸಂಬಂಧವಿರಿಸ ಬೇಕೆಂಬುದು ಮೊದಲನೇ ಸಂಗತಿಯಾಗಿದೆ. ನಮಾಝ್ ನಿರ್ವಹಿಸುವ ಮತ್ತು ಖುರ್‌ಆನ್ ಓದುವ ಅಭ್ಯಾಸ ಮಾಡಿರಿ.

**(ಅಲ್‌ಫಝ್ಲ್ ಇಂಟರ್‌ನ್ಯಾಶನಲ್ 30/06/2006)**

## ನ್ಯಾಶನಲ್ ಮಜ್ಲಿಸ್ ಆಮಿಲ ಜಮಾಅತ್ ಅಹ್ಮದಿಯಾ ನ್ಯೂಝಿಲೇಂಡ್‌ನೊಂದಿಗೆ ಮೀಟಿಂಗ್

ತಿಂಗಳಲ್ಲಿ ಒಂದು ತರಬೇತಿ ಮೀಟಿಂಗ್ ನಡೆಯುತ್ತದೆ ಎಂದು ತರಬೇತಿ ಸೆಕ್ರಿಟರಿ ಹೇಳಿದರು. ಹುಝೂರ್ ಕೇಳಿದರು: ಮೀಟಿಂಗಿನಲ್ಲಿ ಬರದವರಿಗಾಗಿ ನೀವು ಏನು ಮಾಡಿದ್ದೀರಿ? ತರಬೇತಿ ಸೆಕ್ರಿಟರಿ ಹೇಳಿದರು: ನಾವು ಮನೆಗೆ ಹೋಗಿ ಭೇಟಿ ಮಾಡುತ್ತೇವೆ, ಗಮನ ಹರಿಸುತ್ತೇವೆ, ನಮಾಝ್ ನಿರ್ವಹಿಸುವುದರ ಮತ್ತು ಖುತ್‌ಬ ಕೇಳುವುದರ ಬಗ್ಗೆ ಅವಲೋಕನ ನಡೆಸುತ್ತೇವೆ. ಈ ರೀತಿಯಲ್ಲಿ ಕೆಲವರು ಮೀಟಿಂಗುಗಳಲ್ಲಿ ಬರಲು ಶುರು ಮಾಡಿದ್ದಾರೆ.

ಹುಝೂರ್ ಹೇಳಿದರು: ನಮಾಝಿನೊಂದಿಗೆ ಪವಿತ್ರ ಖುರ್‌ಆನಿನ ತಿಲಾವತಿನ ಬಗ್ಗೆ ಸಹ ಪರಿಶೋಧನೆ ನಡೆಸಿರಿ. ಡಿಶ್ ಅಳವಡಿಸಿದ ನಂತರ ಎಷ್ಟು ಜನರು ಮತ್ತು ಕುಟುಂಬಗಳು ಖುತ್‌ಬಗಳನ್ನು ಕೇಳುತ್ತಾರೆ ಎಂದು ನೋಡಿರಿ. ಎಷ್ಟು ಜನರು ಖುತ್‌ಬಗಳನ್ನು ಮತ್ತು ಇತರ ಎಂ.ಟಿ.ಎ. ಕಾರ್ಯಕ್ರಮಗಳನ್ನು ಆಲಿಸಿದ್ದಾರೆ ಎಂಬುದರ ರಿಪೋರ್ಟ್ ನಿಮಗೆ ಪ್ರತಿ ತಿಂಗಳು ಬರಬೇಕು.

**(ಅಲ್‌ಫಝ್ಲ್ ಇಂಟರ್‌ನ್ಯಾಶನಲ್ 30/06/2006)**

13/05/2006

## ನ್ಯಾಶನಲ್ ಮಜ್ಲಿಸ್ ಆಮಿಲ ಜಪಾನ್‌ನೊಂದಿಗೆ ಮೀಟಿಂಗ್

ಹುಝೂರ್ ಹೇಳಿದರು ಪ್ರತಿ ತಿಂಗಳು ತರಬೇತಿ ವಿಷಯದಲ್ಲಿ, ವಿಶೇಷವಾಗಿ ನಮಾಝಿನ ಬಗ್ಗೆ ಮೀಟಿಂಗ್ ನಡೆಯಬೇಕು. ನಮಾಝಿನ ಬಗ್ಗೆ ಜಮಾಅತ್ ಎಷ್ಟು ಶ್ರದ್ದೆವಹಿಸಿದೆ, ಏನು ಪ್ರಯತ್ನ ಮಾಡಿದೆ ಮತ್ತು ಅದರ ಫಲಿತಾಂಶ ಏನಾಯಿತು ಎಂದು ಪರಿಶೋಧಿಸಬೇಕು.

ಹುಝೂರ್ ಮುಬಲ್ಲಿಗರಿಗೆ ನಿರ್ದೇಶನ ಕೊಡುತ್ತಾ ಹೇಳಿದರು: ನಿಮ್ಮ ಪ್ರತಿ ನಾಲ್ಕನೇ ಖುತ್‌ಬ ತರ್‌ಬಿಯತ್ ಕುರಿತು ಆಗಿರಬೇಕು ಮತ್ತು

ಆರನೇ ಖುತ್‌ಬ ಧನತ್ಯಾಗದ ಕುರಿತಾಗಿರಬೇಕು. (ಸೂಚನೆ: ಇನ್ನು ಮುಂದೆ ಪ್ರತಿ ಜುಮಾದಲ್ಲಿ ಖಲೀಫತುಲ್ ಮಸೀಹರ ಹಿಂದಿನ ವಾರದ ಜುಮಾ ಖುತ್‌ಬದ ಸಾರಾಂಶ ಮಸೀದಿಯಲ್ಲಿ ಓದಬೇಕೆಂದು ಭಾರತದ ಎಲ್ಲ ಜಮಾಅತುಗಳಲ್ಲಿ ಇರುವ ಮುಅಲ್ಲಿಮ್ ಮತ್ತು ಮುಬಲ್ಲಿಗರಿಗೆ ನಿರ್ದೇಶನ ಕಳುಹಿಸಿರಿ ಎಂದು 2012ರಲ್ಲಿ ಸನ್ಮಾನ್ಯ ನಾಝಿರ್ ಆಅ್‌ಲಾ ಸಾಹಿಬ್‌ರಿಗೆ ಖಲೀಫತುಲ್ ಮಸೀಹ್‌ರಿಂದ ನಿರ್ದೇಶನ ಬಂದಿತ್ತು.)

ಹುಝೂರ್ ಹೇಳಿದರು: ಎಂ.ಟಿ.ಎ ದಿಂದ ಎಷ್ಟು ಜನರು ಖುತ್‌ಬಗಳನ್ನು ಕೇಳುತ್ತಾರೆ ಎಂದು ಅವಲೋಕನ ನಡೆಸಿರಿ. ಅದರ ರಿಪೋರ್ಟ್ ಪಡೆಯಿರಿ.

**(ಅಲ್‌ಫರ್ಝ್‌ಲ್ ಇಂಟರ್‌ನ್ಯಾಶನಲ್ 30/06/2006)**

07/06/2006

## ನ್ಯಾಶನಲ್ ಮಜ್ಲಿಸ್ ಆಮಿಲ ಜರ್ಮನಿಯೊಂದಿಗೆ ಮೀಟಿಂಗ್

ಮೀಟಿಂಗಿನಲ್ಲಿ ಹುಝೂರ್ ಕೆಲವು ವಿಭಾಗಗಳ ಅವಲೋಕನ ನಡೆಸಿ ವಿವಿಧ ವ್ಯವಸ್ಥೆ ಮತ್ತು ತರಬೇತಿ ವಿಷಯಗಳ ಕುರಿತು ಅಮೂಲ್ಯ ಉಪದೇಶಗಳನ್ನು ನೀಡಿದರು ಹಾಗೂ ಬಲಹೀನತೆಗಳನ್ನು ದೂರ ಮಾಡುವ ಕಡೆಗೆ ಗಮನ ಹರಿಸಿದರು. ಹುಝೂರಿನ ನಿರ್ದೇಶನಗಳ ಮತ್ತು ಉಪದೇಶಗಳ ಸಂಕ್ಷೇಪ ಕೆಳಗೆ ಕೊಡಲಾಗಿದೆ:

ಹುಝೂರ್ ಹೇಳಿದರು: ಹುದ್ದೆಗಳನ್ನು ಸೇವೆ ಎಂದು ಮನವರಿಕೆ ಮಾಡಿ ನಿಭಾಯಿಸಿರಿ ಮತ್ತು ಆಫೀಸರ್ ಆಗಿದ್ದೇವೆ ಎಂಬ ಭಾವನೆ ತೊರೆದುಕೊಂಡು ಸೇವಕ ಎಂಬ ಭಾವನೆ ಹೃದಯದಲ್ಲಿ ಸ್ಥಾಪಿಸಿರಿ. ಈ ವಿಷಯದಲ್ಲಿ ಮರ್ಹೂಮ್ ಮೀರ್ ದಾವೂದ್ ಅಹ್ಮದ್ ಸಾಹಿಬರ ಉದಾಹರಣೆ ಹುಝೂರ್ ನೀಡಿದರು. ಅವರು ಜಲಸಾ ಸಾಲಾನದಲ್ಲಿ ತಮ್ಮ ನಾಮಧೇಯ (ಟೈಟಲ್) "ಅಫ್‌ಸರ್ ಜಲಸಾ ಸಾಲಾನ" ಎಂಬುದರ ಬದಲಾಗಿ "ಖಾದಿಮ್ ಜಲಸಾ ಸಾಲಾನ" ಎಂದು ಬರೆಯಲು ಶುರು ಮಾಡಿದ್ದರು.

ಹುದ್ದೇದಾರರ ವಿರುದ್ಧ ಇದ್ದ ದೂರುಗಳನ್ನು ಪರಿಶೋಧಿಸಬೇಕಾದ ರೀತಿಯನ್ನು ತಿಳಿಸುತ್ತಾ ಹುಝೂರ್ ಹೇಳಿದರು: ಇಂತಹ ದೂರುಗಳನ್ನು ಪರೀಕ್ಷಿಸಲು ಸಮಿತಿಯನ್ನು ಮಾಡುವ ಬದಲಾಗಿ, ಪತ್ರಗಳ ಮೂಲಕ ರಹಸ್ಯವಾಗಿ, ಅವರು ಅದರಲ್ಲಿ ಒಳಪಟ್ಟಿದ್ದಾರೆಯೇ ಎಂದು ಹುದ್ದೇದಾರರನ್ನು ಕೇಳಬೇಕು. ಅದರಲ್ಲಿ ಒಳಪಟ್ಟಿದ್ದಾರೆ ಎಂದಾದರೆ, ಅವರ ಮತ್ತು ಅವರ ಮಕ್ಕಳ ಯಾವುದಾದರೂ ತಪ್ಪಾದ ಕೆಲಸದ ಕಾರಣ ಜಮಾಅತಿನ ಘನತೆಗೆ ಧಕ್ಕೆ ಉಂಟಾಗದಿರಲಿಕ್ಕಾಗಿ ಅವರು ತಮ್ಮ ಆತ್ಮ ಪರಿಶೋಧನೆ ನಡೆಸಿ ತಮ್ಮ ಸುಧಾರಣೆ ಮಾಡಬೇಕು. ಪ್ರಯತ್ನಗಳ ನಂತರವೂ ತಮ್ಮಲ್ಲಿ ಮತ್ತು ತಮ್ಮ ಮನೆಯವರಲ್ಲಿ ಯಾವುದೇ ಸುಧಾರಣೆ ಉಂಟು ಮಾಡಲು ಆಗಲಿಲ್ಲ ಎಂದಾದರೆ ಸ್ವತಃ ಸೇವೆಯಿಂದ ಹೊರಗೆ ನಿಲ್ಲುವುದು ತಖ್ವಾ (ದೇವಭಕ್ತಿ) ಆಗಿದೆ. ಪ್ರತಿಯೊಬ್ಬ ಹುದ್ದೇದಾರನ ಸ್ಥಾನವನ್ನು ಪರಿಗಣಿಸಬೇಕಾದ ಕಡೆಗೆ ಹುಝೂರ್ ವಿಶೇಷವಾದ ಗಮನಹರಿಸುತ್ತಾ ಹೇಳಿದರು: ತಮಗಿಂತ ಮೇಲಿನ ಹುದ್ದೇದಾರರನ್ನು ಗೌರವಿಸುವುದು ಮತ್ತು ಅವರನ್ನು ಅನುಸರಿಸುವುದು ಆವಶ್ಯಕ. ನಿಮ್ಮ ಮೇಲಿನ ಹುದ್ದೇದಾರರರು ನಿಮಗೆ ಯಾವುದಾದರೂ ಸೇವೆ ಒಪ್ಪಿಸಿದ್ದರೆ, ನಿಮಗೆ ಅವರ ಬಗ್ಗೆ ದೂರು ಇದ್ದರೆ, ಮೊದಲು ಅನುಸರಣೆ ಮಾಡುತ್ತಾ ಆ ಕೆಲಸವನ್ನು ಮಾಡಬೇಕು. ಅನಂತರ ಕೇಂದ್ರಕ್ಕೆ ಅಥವಾ ಖಲೀಫರಿಗೆ ಅವರು ಮಾಡಿದ ತಪ್ಪಿನ ಬಗ್ಗೆ ದೂರು ಕೊಡುವುದಾಗಿ ಅವರಿಗೆ ತಿಳಿಸಬೇಕು.

ತಮ್ಮ ಉತ್ತಮವಾದ ಮಾದರಿ ತೋರಿಸಬೇಕೆಂದು ಸಹ ಹುದ್ದೇದಾರರಿಗೆ ಹುಝೂರ್ ಉಪದೇಶಿಸಿದರು. ಕೆಲವು ಬಾರಿ ಹುದ್ದೇದಾರರ ಗಾರ್ಹಿಕ (ಮನೆಯ) ಜೀವನದ ಮಾದರಿ ಸರಿಯಾಗಿರುವುದಿಲ್ಲ. ತಮ್ಮ ಸೊಸೆಯಂದಿರು, ಅಳಿಯಂದಿರು, ಮಕ್ಕಳು ಮತ್ತು ಪತ್ನಿಯರೊಂದಿಗೆ ಜಗಳ ಮಾಡುತ್ತಾರೆ. ಇಂತಹ ದೌರ್ಬಲ್ಯಗಳನ್ನು ದೂರ ಮಾಡಲು ಪ್ರಯತ್ನಿಸಬೇಕು. ಹಾಗೆ ಮಾಡಲು ಸಾಧ್ಯವಿಲ್ಲವೆಂದಾದರೆ, ಜಮಾಅತಿನ ಕೆಲಸವನ್ನು ಸ್ವತಃ ಬಿಟ್ಟುಬಿಡಿರಿ. ಒಳಿತಿನ ಕಾರ್ಯಗಳಲ್ಲಿ ಪರಸ್ಪರ ನೆರವು ಮಾಡಲು ಉಪದೇಶಿಸುತ್ತಾ ಹುಝೂರ್ ಹೇಳಿದರು: ಎಲ್ಲರ ಉದ್ದೇಶ ಒಂದೇ ಆಗಿದೆ. ಎಲ್ಲರೂ ಸೇರಿಕೊಂಡು ಕೆಲಸ ಮಾಡಿರಿ. ಶಾಖಾ ಸಂಘಟನೆಗಳು ಜಮಾಅತಿನ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಮಾರ್ಗವಾಗಿರುತ್ತವೆ.

ಹುಝೂರ್ ಒಂದು ತರಬೇತಿ ವಿಷಯದ ಕಡೆಗೆ ಗಮನಹರಿಸುತ್ತಾ ಹೇಳಿದರು: ನಿಮ್ಮ ಮೀಟಿಂಗುಗಳ ಮತ್ತು ಮಜ್‌ಲಿಸ್‌ಗಳ ಮಾತುಗಳನ್ನು ರಹಸ್ಯವಾಗಿ ಇಡಬೇಕು. ಇದು ಮೂಲಭೂತ ಸಂಗತಿಯಾಗಿದೆ. ಮಜ್ಲಿಸ್‌ಗಳ ಮಾತುಗಳು ಅಮಾನತ್ತಾಗಿರುತ್ತವೆ (ರಹಸ್ಯವಾಗಿರಿಸಬೇಕಾದ ಸಂಗತಿ). ಆದ್ದರಿಂದ ಅದನ್ನು ಕಾಪಾಡಬೇಕು.

**(ಅಲ್‌ಫಝ್‌ಲ್ ಇಂಟರ್‌ನ್ಯಾಶನಲ್ 07/07/2006)**

09/06/2006

## ಜುಮಾ ಖುತ್‌ಬದಲ್ಲಿ ಹುದ್ದೇದಾರರಿಗೆ ನಿರ್ದೇಶನಗಳು

ಅದೇ ರೀತಿಯಲ್ಲಿ ಅಮೀರರು ಮತ್ತು ಕೇಂದ್ರೀಯ ಹುದ್ದೇದಾರರೊಂದಿಗೆ ನಾನು ಹೇಳುತ್ತೇನೆ: ಜಮಾಅತಿನ ಸಹಕಾರ ಮತ್ತು ಅನುಸರಣೆಯ ಮಟ್ಟ ವರ್ಧಿಸಬೇಕೆಂದು ಅವರು ಇಚ್ಛಿಸುವುದಾದರೆ, ಹೃದಯದ ಮಿಡಿತದೊಂದಿಗೆ ನಾಡಿಮಿಡಿತ ಒಟ್ಟೊಟ್ಟಿಗೆ ಸಾಗುವಂತೆ ಸ್ವತಃ ಕಾಲದ ಖಲೀಫರ ತೀರ್ಮಾನಗಳನ್ನು ಅನುಸರಿಸಬೇಕು. ಈ ಮಟ್ಟವನ್ನು ಪಡೆಯುವುದಾದರೆ ಒಬ್ಬ ಸಾಧಾರಣ ಅಹ್ಮದೀ ಸಹ ಹೇಗೆ ಅನುಸರಣೆ ಮಾಡುವನು ಎಂದು ನೀವು ನೋಡುವಿರಿ..........

ಪ್ರತಿಯೊಂದು ಅಂತಸ್ತಿನ ಹುದ್ದೇದಾರರು, ಅವರು ಪ್ರಾದೇಶಿಕ ಆಮಿಲದ ಮೆಂಬರ್ ಆಗಿರಲಿ, ಸದರ್ ಜಮಾಅತ್ ಆಗಿರಲಿ, ರೀಜನಲ್ ಅಮೀರ್ ಆಗಿರಲಿ, ಕೇಂದ್ರೀಯ ಆಮಿಲದ ಮೆಂಬರ್ ಅಥವಾ ಅಮೀರ್ ಆಗಿರಲಿ, ಎಲ್ಲರೂ ತಮ್ಮ ಯೋಚನೆಯನ್ನು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಿಶ್ಚಯಿಸಿದ ಮಟ್ಟಕ್ಕೆ ತನ್ನಿರಿ. ಎಂದರೆ **"ನೀವು ನಿಮ್ಮ ಸ್ವಾರ್ಥ ಅಭಿಲಾಷೆಗಳನ್ನು, ಅಹಂಕಾರವನ್ನು ಸಂಹರಿಸಬೇಕು (ತ್ಯಾಗ ಮಾಡಬೇಕು)."**

ಇಲ್ಲಿ ನಾನು ಇನ್ನೊಂದು ಸಂಗತಿಯ ಕಡೆಗೆ ಮುರಬ್ಬಿ, ಮುಬಲ್ಲಿಗರ ಗಮನಹರಿಸುತ್ತೇನೆ....... ಅಮೀರ್ ಅಥವಾ ಹುದ್ದೇದಾರರಲ್ಲಿ ಜಮಾಅತಿನ ನಡೆವಳಿಕೆ ಕ್ರಮಗಳಿಗೆ ವಿರುದ್ಧವಾದ ಸಂಗತಿ ಕಂಡರೆ ಹುದ್ದೇದಾರರಿಗೆ ಅಮೀರರಿಗೆ ರಹಸ್ಯವಾಗಿ ತಿಳಿ ಹೇಳಿಕೊಡಿರಿ.......

ಹೇಳಿದ ನಂತರವೂ ಹುದ್ದೇದಾರರು ಮತ್ತು ಅಮೀರ್ ತಮ್ಮ ತಪ್ಪನ್ನು ಸರಿಪಡಿಸದಿದ್ದರೆ, ಅದು ಜಮಾಅತಿನ ಒಳಿತಿಗೆ ಕೇಡು ಉಂಟು ಮಾಡುತ್ತಿದೆ ಎಂದು ನಿಮಗೆ ಅನಿಸುವುದಾದರೆ, ನೀವು ಕಾಲದ ಖಲೀಫರಿಗೆ ತಿಳಿಸಿರಿ. ಆದರೆ ಅಮೀರ್ ಮತ್ತು ಮುಬಲ್ಲಿಗರ ಮಧ್ಯೆ ಹೊಂದಾಣಿಕೆ (ಅಂಡರ್‌ಸ್ಟಾಂಡಿಗ್) ಮತ್ತು ಸಹಕಾರ ಇಲ್ಲವೆಂಬ ಭಾವನೆ ಜಮಾಅತಿನಲ್ಲಿ ಹರಡಬಾರದು.

ಅದೇ ರೀತಿಯಲ್ಲಿ, ಇಂತಹ ಮುರಬ್ಬಿಗೆ ಇಂತಹ ವ್ಯಕ್ತಿಯೊಡನೆ ಬಹಳ ಹತ್ತಿರದ ಸಂಬಂಧವಿದೆ ಎಂಬ ಭಾವನೆ ಜಮಾಅತಿನ ಯಾವುದೇ ವ್ಯಕ್ತಿಯ ಮನಸ್ಸಲ್ಲಿ ಯಾವುದೇ ಮುರಬ್ಬಿ ಅಥವಾ ಮುಬಲ್ಲಿಗ್‌ರ ಬಗ್ಗೆ ಉಂಟಾಗದಂತೆ ಶ್ರದ್ಧೆವಹಿಸಬೇಕು...... ತಮ್ಮನ್ನು ಪ್ರತಿಯೊಂದು ವ್ಯವಹಾರಗಳಿಂದ ದೂರವಿಟ್ಟುಕೊಂಡು, ಪ್ರತಿಯೊಂದು ಸಂಬಂಧಗಳನ್ನು ಹಿಂದಕ್ಕೆ ಹಾಕಿಕೊಂಡು ಜಮಾಅತಿನ ಒಳಿತಿಗಾಗಿ ಮುರಬ್ಬಿ, ಮುಬಲ್ಲಿಗ್ ಅಥವಾ ಯಾವುದೇ ಕೇಂದ್ರೀಯ ಹುದ್ದೇದಾರರು ಕೆಲಸ ಮಾಡಬೇಕು."

**(ಅಲ್‌ಫಝ್ಲ್ ಇಂಟರ್‌ನ್ಯಾಶನಲ್ 30/06/2006)**

09/06/2006

## ನ್ಯಾಶನಲ್ ಮಜ್ಲಿಸೆ ಆಮಿಲ ಲಜ್‌ನ ಇಮಾಇಲ್ಲಾಹ್ ಜರ್ಮನಿಯೊಂದಿಗೆ ಮೀಟಿಂಗ್

ಪರ್ದಾದ ಪ್ರಾಮುಖ್ಯತೆಗೆ ಒತ್ತುಕೊಡುತ್ತಾ ಹುಝೂರ್ ಹೇಳಿದರು: ಪರ್ದಾ ಧರಿಸಬೇಕೆಂಬುದು ಅಲ್ಲಾಹನ ಆಜ್ಞೆ ಆಗಿದೆ ಎಂಬ ಸಂಗತಿಯನ್ನು ಹುಡುಗಿಯರ ಮನಸ್ಸಲ್ಲಿ ಹಾಕಬೇಕು. ಜಮಾಅತಿನ ರೀತಿ ನೀತಿಗಳಂತೆ ನಡೆದರೆ ಯಾವುದೇ ಕೀಳರಿಮೆ ಉಂಟಾಗುವುದಿಲ್ಲ ಮತ್ತು ಇದರಿಂದಲೇ ತಬ್ಲೀಗಿನ ಮಾರ್ಗಗಳು ತೆರೆಯಲ್ಪಡುವುದು. ಪಾಕಿಸ್ತಾನದ ಕೆಲವು ಹೆಣ್ಣು ಮಕ್ಕಳು ವಿವಾಹವಾಗಿ ಇಲ್ಲಿಗೆ ಬರುತ್ತಾರೆ. ಅಲ್ಲಿ ಅವರು ಬುರ್ಖಾ ಧರಿಸುತ್ತಾರೆ. ಆದರೆ ಇಲ್ಲಿಗೆ ಬಂದ ಕೂಡಲೇ ಕಳಚುತ್ತಾರೆ. ಇದು ಲಜ್ಜಾಹೀನತೆ ಆಗಿದೆ. ಇದು ವೈಯಕ್ತಿಕ ಕೀಳರಿಮೆ ಕಾರಣದಿಂದಲೂ ಆಗಿರಬಹುದು ಮತ್ತು ಗಂಡ ಹಾಗೆ ಮಾಡಲು ಹೇಳಿದ ಕಾರಣದಿಂದಲೂ ಆಗಿರಬಹುದು. ಜರ್ಮನಿಯ ಸ್ತ್ರೀಯರು ಅಹ್ಮದಿಯಾದ

ನಂತರ ಒಳ್ಳೆಯ ಉಡುಪು (ವಸ್ತ್ರ) ಧರಿಸುವಾಗ ಇವರಿಗೆ ಸರಿಯಾದ ಪರ್ದಾ ಧರಿಸಲು ಯಾವ ಅಡ್ಡಿಯಿದೆ? ಈಗ ಟೆಕ್ಸ್ಟ್ ಮೆಸೇಜಿನ( ) ರಿವಾಜು ನಡೆಯುತ್ತಿದೆ. ಇದು ಸಹ ಅಪರಿಚಿತರೊಂದಿಗೆ ಆಗಬಾರದು. ಕೆಲವು ಸಲ ಗೆಳತಿಯರು ಬೇರೆಯವರಿಗೆ ನಂಬರ್ ಕೊಡುತ್ತಾರೆ. ಇದರ ಕಡೆಗೆ ವಿಶೇಷವಾದ ಶ್ರದ್ಧೆವಹಿಸಬೇಕು.

**(ಅಲ್‌ಫರ್ಝ್ಲ್ ಇಂಟರ್‌ನ್ಯಾಶನಲ್ 07/07/2006)**

10/06/2006

## ಖಾಇದರು, ಪ್ರಾದೇಶಿಕ ಖಾಇದರು ಮತ್ತು ನ್ಯಾಶನಲ್ ಮಜ್ಲಿಸೆ ಆಮಿಲ ಖುದ್ದಾಮುಲ್ ಅಹ್ಮದಿಯಾ ಜರ್ಮನಿಯೊಂದಿಗೆ ಮೀಟಿಂಗ್

ಮುಹ್ತಮಿಮ್ ತರ್‌ಬಿಯತ್‌ನೊಡನೆ ಹುಝೂರ್ ಹೇಳಿದರು: ಖುದ್ದಾಮರ ಕಲಹಗಳನ್ನು ದೂರ ಮಾಡಲು ಉಪದೇಶಿಸುತ್ತಾ ಇರಬೇಕು. ಹಲವು ಜನರು ಹೊರಗೆ ಒಳ್ಳೆಯವರಾಗಿರುತ್ತಾರೆ; ಆದರೆ ಅವರ ಮನೆಯ ಅವಸ್ಥೆ ಕೆಟ್ಟದಾಗಿರುತ್ತದೆ. ಯಾರನ್ನು ತರಬೇತಿ ಮಾಡಲು ಉದ್ದೇಶಿಸಲಾಗಿದೆಯೋ ಅವರ ಒಬ್ಬ ಒಳ್ಳೆಯ ಸ್ನೇಹಿತನನ್ನು ಹುಡುಕಿ ಅವರ ಸುಧಾರಣೆ ಮಾಡಲು ಪ್ರಯತ್ನಿಸಬೇಕು. ಇದರ ಉದ್ದೇಶ ಜನರ ಸುಧಾರಣೆಯಾಗಿದೆ ಮತ್ತು ಅವರನ್ನು ಒಂದು ವ್ಯವಸ್ಥೆಯ ಕೆಳಗೆ ಪೋಣಿಸುವುದಾಗಿದೆ.

**(ಅಲ್‌ಫರ್ಝ್ಲ್ ಇಂಟರ್‌ನ್ಯಾಶನಲ್ 07/07/2006)**

14/06/2006

## ನ್ಯಾಶನಲ್ ಮಜ್ಲಿಸ್ ಆಮಿಲ ಅನ್ಸಾರುಲ್ಲಾಹ್ ಜರ್ಮನಿಯೊಂದಿಗೆ ಮೀಟಿಂಗ್

ತರಬೇತಿ ಮತ್ತು ತಅ್‌ಲಿಮುಲ್ ಖುರ್‌ಆನ್ ವಿಭಾಗದ ಅವಲೋಕನ ನಡೆಸುತ್ತಾ ಹುಝೂರ್ ಹೇಳಿದರು: "ಮೊದಲು ಮಸೀದಿಗಳ ಮತ್ತು ನಮಾಝ್ ಸೆಂಟರ್‌ಗಳ ಒಟ್ಟು ಸಂಖ್ಯೆ ಗೊತ್ತು ಮಾಡಿರಿ. ಅನಂತರ ಎಷ್ಟು ಮಜ್‌ಲಿಸ್‌ಗಳಲ್ಲಿ ಜಮಾಅತಾದ ನಮಾಝಿನ ವ್ಯವಸ್ಥೆ ಇದೆ ಎಂದು ನೋಡಿರಿ. ಎಲ್ಲ ಸ್ಥಳಗಳಲ್ಲಿ ಕನಿಷ್ಠ ಪಕ್ಷ ಎರಡು ನಮಾಝ್ ಜಮಾಅತಾಗಿ ನಡೆಯಬೇಕು." ಮಾರ್ಚ್‌ನಲ್ಲಿ ತರಬೇತಿ ವಾರವನ್ನು ಆಚರಿಸಲಾಯಿತು, ನಮಾಝ್ ನಿರ್ವಹಿಸುವ ಮತ್ತು ತಿಲಾವತ್ ಮಾಡುವವರ ಸಂಖ್ಯೆಯಲ್ಲಿ ವರ್ಧನೆ ಉಂಟಾಗಿದೆ ಎಂದು ಎಪ್ರಿಲಿನ ರಿಪೋರ್ಟಿನಿಂದ ತಿಳಿದುಬಂದಿದೆ ಎಂದು ಹುಝೂರರೊಡನೆ ಹೇಳಲಾಯಿತು. ಹುಝೂರ್ ಹೇಳಿದರು: ಈಗ ಪುನಃ ರಿಪೋರ್ಟ್ ಕೇಳಿರಿ ಮತ್ತು ಈ ಬದಲಾವಣೆ ತರಬೇತಿ ವಾರದಲ್ಲಿ ಮಾತ್ರವಾಗಿತ್ತೋ ಅಥವಾ ಅದರ ನಂತರವೂ ಜಾರಿಯಲ್ಲಿತ್ತೋ ಎಂದು ನೋಡಿರಿ. ಮಕ್ಕಳ ತರಬೇತಿ ಕಡೆಗೆ ಅನ್ಸಾರ್ ಸಹೋದರರ ಗಮನ ಹರಿಸುತ್ತಾ ಹುಝೂರ್ ಹೇಳಿದರು: ದ್ವಿತೀಯ ಶ್ರೇಣಿಯ ಅನ್ಸಾರರ (41 ವಯಸ್ಸಿನಿಂದ 55ರ ವರೆಗೆ) ಬಹುತೇಕ ಮಕ್ಕಳು ಚಿಕ್ಕವರು ಆಗಿರುವರು. ಮಕ್ಕಳು ಒಳ್ಳೆಯ ಸ್ವಭಾವ ಉಳ್ಳವರಾಗಲು ಅವರ ಒಳ್ಳೆಯ ತರಬೇತಿ ಮಾಡಿರಿ. ಮುಂದಿನ ಪೀಳಿಗೆಯನ್ನು ಜಮಾಅತಿನ ವ್ಯವಸ್ಥೆಯೊಂದಿಗೆ ಜೋಡಿಸಲು ಮಕ್ಕಳ ತರಬೇತಿಯ ಕಡೆಗೆ ವಿಶೇಷವಾದ ಗಮನ ಕೊಡಬೇಕೆಂದು ಹುಝೂರ್ ಪುನಃ ಅನ್ಸಾರರನ್ನು ಉಪದೇಶಿಸಿದರು.

**(ಅಲ್‌ಫಝ್ಲ್ ಇಂಟರ್‌ನ್ಯಾಶನಲ್ 14/07/2006)**

## ನ್ಯಾಶನಲ್ ಮಜ್ಲಿಸೆ ಆಮಿಲ ಯು.ಎಸ್.ಎ. ಯೊಂದಿಗೆ ಮೀಟಿಂಗ್

ತರಬೇತಿಗಾಗಿ ವಿಶೇಷವಾದ ಯೋಜನೆ ಏನೆಂದು ಸೆಕ್ರೆಟರಿ ತರಬೇತಿಯೊಡನೆ ಹುಝೂರ್ ಕೇಳಿದರು. ತರಬೇತಿ ಸೆಮಿನಾರ್‌ಗಳ (ವಿಚಾರ ಸಂಕಿರಣ) ಒಂದು ಪರಂಪರೆಯಿದೆ (ಸಿರೀಸ್) ಎಂದು ಸೆಕ್ರೆಟರಿ ಹೇಳಿದರು. ಹುಝೂರ್ ಹೇಳಿದರು: ಜಮಾಅತುಗಳಲ್ಲಿ ನಿಮ್ಮ ಸೆಕ್ರೆಟರಿ ತರ್‌ಬಿಯತ್ ಚುರುಕುಗೊಂಡರೆ ನಿಮಗೆ ಸುಲಭವಾಗಿ ಪ್ರತಿಕ್ರಿಯೆಗಳನ್ನು (ಫೀಡ್‌ಬ್ಯಾಕ್) ಪಡೆಯಬಹುದು. ನಿಮ್ಮ ಸೆಕ್ರೆಟರಿ ತರಬೇತಿಯನ್ನು ಆಕ್ಟಿವ್ ಮಾಡಿರಿ.

**"ನ್ಯಾಶನಲ್ ಇಸ್ಲಾಹೀ ಸಮಿತಿ"** ಯ ಕೆಲಸದ ಬಗ್ಗೆ ಸಹ ಸೆಕ್ರೆಟರಿ ತರ್‌ಬಿಯತ್ ಹೇಳಿದರು. ಹುಝೂರ್ ಹೇಳಿದರು: ಕೇಂದ್ರ ಮತ್ತು ಜಮಾಅತುಗಳಲ್ಲಿ ಇಸ್ಲಾಹೀ ಸಮಿತಿ ಕ್ರಿಯಾಶೀಲವಾದರೆ ಇಂದು ಹೆಚ್ಚಾಗಿ ಆಗುತ್ತಿರುವ ವೈವಾಹಿಕ ಸಮಸ್ಯೆಗಳು ಉಂಟಾಗಲಿಕ್ಕಿಲ್ಲ.

ಹುಝೂರ್ ಕೇಳಿದರು: ಇಸ್ಲಾಹೀ ಸಮಿತಿಯಲ್ಲಿ ಈ ವರ್ಷ ಬಂದಿರುವ ಕೇಸುಗಳು ಕಳೆದ ವರ್ಷ ಬಂದ ಕೇಸುಗಳಿಗಿಂತ ಅಧಿಕವಾಗಿದೆಯೇ ಅಥವಾ ಕಡಿಮೆಯಾಗಿದೆಯೇ?

ಹುಝೂರಿನ ಮುಂದೆ ರಿಪೋರ್ಟ್ ಸಮರ್ಪಿಸುತ್ತಾ ಹೀಗೆ ಹೇಳಲಾಯಿತು: ಬರುತ್ತಿರುವ ಕೇಸುಗಳು ಅಪಾಯ ಸೂಚಿಸುವಂಥದ್ದೂ ಚಿಂತಾಜನಕವೂ ಆಗಿವೆ. ಅವುಗಳು ಪ್ರತಿ ತಿಂಗಳು ಬರುತ್ತಿವೆ. ಹುಝೂರ್ ಹೇಳಿದರು: ಇಂತಹ ಕೆಲವು ಕೇಸುಗಳು ಉಮೂರೆ ಆಮ್ಮ ಮತ್ತು ಮುಬಲ್ಲಿಗರ ಅರಿವಲ್ಲಿ ಇರಬಹುದು. ಇದರ ಬಗ್ಗೆ ಎಲ್ಲ ವಿವರಗಳನ್ನು ಪಡೆಯಿರಿ.

**(ಅಲ್‌ಫಝ್ಲ್ ಇಂಟರ್‌ನ್ಯಾಶನಲ್ 15/08/2008)**

*******

## ಸುಧಾರಣೆ ಮತ್ತು ತರಬೇತಿಯ ನಾಲ್ಕು ಮೂಲ ಮಾರ್ಗಗಳು

ಸನ್ಮಾನ್ಯ ವಕೀಲ್ ತಅ್‌ಮೀಲ್ ವ ತನ್‌ಫೀಝ್ ಖಾದಿಯಾನಿನ ಮತ್ತು ಭಾರತದ ಜಮಾಅತಿನ ವ್ಯಕ್ತಿಗಳ ತರಬೇತಿಗಾಗಿ ಹಝ್ರತ್ ಖಲೀಫತುಲ್ ಮಸೀಹರ ಈ ಕೆಳಗಿನ ನಿರ್ದೇಶನಗಳನ್ನು ಕಳುಹಿಸಿದರು. ಅದರಲ್ಲಿ ಹುಝೂರ್ ಹೇಳುತ್ತಾರೆ:

"ಜಮಾಅತಿನ ವತಿಯಿಂದ ಮಾಡಲಾಗುವ ತೀರ್ಮಾನಗಳನ್ನು ತಕ್ಷಣ ಅನುಸರಿಸುವ ಮಾದರಿ ಕಾಣಬೇಕಾಗಿದೆ. ಆದರೆ ಕಳೆದ ಇಪ್ಪತ್ತೈದು ವರ್ಷಗಳಿಂದ ಖಾದಿಯಾನಿನ ಜನರಲ್ಲಿ ಈ ಮಾದರಿ ಕಾಣುತ್ತಿಲ್ಲ...ನಿಮ್ಮಲ್ಲಿ ಯಾರೂ ಅವರ ತರಬೇತಿ ಕುರಿತಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಿಲ್ಲ ಎಂದು ಈ ಸಂಗತಿಗಳು ಸ್ಪಷ್ಟಪಡಿಸುತ್ತಿವೆ. ನಝಾರತ್ ಇಸ್ಲಾಹೋ ಇರ್‌ಶಾದ್ ಆಗಲಿ, ಸದಾರತ್ ಉಮೂಮಿ ಆಗಲಿ, ಖುದ್ದಾಮುಲ್ ಅಹ್ಮದಿಯಾ ಆಗಲಿ ತಮ್ಮ ಜವಾಬ್ದಾರಿಗಳನ್ನು ಈಡೇರಿಸಿಲ್ಲ. ಅವರಲ್ಲಿ ಅನುಸರಣೆಯ ಗುಣ ಉಂಟು ಮಾಡಲಿಲ್ಲ. ಅಲ್ಲಾಹನು ನಿಮ್ಮ ಅವಸ್ಥೆಯ ಮೇಲೆ ಕರುಣೆದೋರಲಿ, ತಮ್ಮ ಕರ್ತವ್ಯಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಲು ಮತ್ತು ಅಲ್ಲಿಯ ಜನರ ತರಬೇತಿ ಮಾಡಲು ಅಲ್ಲಾಹನು ನಿಮಗೆ ಸೌಭಾಗ್ಯ ನೀಡಲಿ. (WTT-7947/17.07.2015)

ಹಝ್ರತ್ ಖಲೀಫತುಲ್ ಮಸೀಹರ ಈ ಚಿಂತಾಜನಕ ನಿರ್ದೇಶನ ಕಳುಹಿಸುತ್ತಾ ಸನ್ಮಾನ್ಯ ವಕೀಲ್ ತಅ್‌ಮೀಲ್ ವ ತನ್‌ಫೀಝ್ ಸಾಹಿಬರು ಹೀಗೆ ಬರೆದರು:

"ಹಝ್ರತ್ ಖಲೀಫತುಲ್ ಮಸೀಹರ ಮೇಲಿನ ನಿರ್ದೇಶನ ಕೇಂದ್ರೀಯ ಹುದ್ದೇದಾರರಾದ ನೀವೆಲ್ಲರೂ ಚಿಂತಿಸಬೇಕಾದ ಸಂಗತಿಯಾಗಿದೆ. ಈ ಸಂದರ್ಭದಲ್ಲಿ ಭಾರತದ ಎಲ್ಲ ಜಮಾಅತಿನ ವ್ಯಕ್ತಿಗಳ ತರಬೇತಿಗಾಗಿ ಸರಿಯಾದ ಮತ್ತು ಆವಶ್ಯಕ ವ್ಯವಸ್ಥೆ ಬೇಗನೆ ಮಾಡದಿದ್ದರೆ ಅನ್ಸಾರ್‌ರೊಂದಿಗೆ ಖುದ್ದಾಮ್ ಮತ್ತು ಅತ್‌ಫಾಲ್‌ರಲ್ಲಿ ಸಹ ತರಬೇತಿ ಪರವಾದ ಹಲವು ದೌರ್ಬಲ್ಯಗಳು ಬಾಕಿಯಾಗಿ ಉಳಿಯುವುವು. ಅವುಗಳಿಗೆ ಹೆತ್ತವರೊಂದಿಗೆ ಜಮಾಅತಿನ ಹುದ್ದೇದಾರರು ಕೂಡ ಹೊಣೆ ಆಗಿರುವರು. ಈ ವಿಷಯವಾಗಿ ಖಲೀಫತುಲ್ ಮಸೀಹರ ಮಾರ್ಗದರ್ಶನದಿಂದ ಈ ಕೆಳಗಿನ ನಿರ್ದೇಶನಗಳು ನೀಡಲಾಗುತ್ತಿವೆ:

1. ಎಲ್ಲ ಕೇಂದ್ರದ ಮಸೀದಿಗಳು ಮತ್ತು ಪ್ರಾದೇಶಿಕ ಮಸೀದಿಗಳಲ್ಲಿ ಐದು ಹೊತ್ತಿನ ಸಾಮೂಹಿಕ (ಬಾಜಮಾಅತ್) ನಮಾಝ್‌ಗಳಲ್ಲಿ ಉತ್ತಮ ಹಾಜರಿ ಉಂಟಾಗಲು ವಿಶೇಷ ಶ್ರದ್ಧೆವಹಿಸಬೇಕು. ಈ ವಿಷಯವಾಗಿ ಜಮಾಅತಿನ ಯಾರೆಲ್ಲ ನಮಾಝಿನಲ್ಲಿ ಸುಸ್ತಾಗಿರುವರು ಎಂದು ಜಮಾಅತಿನ ಮತ್ತು ಶಾಖಾ ಸಂಘಟನೆಯ ಹುದ್ದೇದಾರರು ಅವಲೋಕಿಸಿ ಬರೆದಿಟ್ಟುಕೊಳ್ಳಬೇಕು. ಅನಂತರ ಜಮಾಅತಿನ ಮತ್ತು ಶಾಖಾ ಸಂಘಟನೆಯ ಹುದ್ದೇದಾರರು ಸರಿಯಾದ ಮತ್ತು ಪ್ರಭಾವಶಾಲಿ ರೀತಿಯಲ್ಲಿ ಈ ಎಲ್ಲ ವ್ಯಕ್ತಿಗಳ ಗಮನ ಹರಿಸಬೇಕು. ಹುದ್ದೇದಾರರು ಗಮನ ಹರಿಸುವ ರೀತಿ ಎಷ್ಟು ಉತ್ತಮ ಮತ್ತು ಪ್ರಭಾವಶಾಲಿಯಾಗಿರಬೇಕೆಂದರೆ ಎಲ್ಲ ವ್ಯಕ್ತಿಗಳಿಗೆ ತಮ್ಮ ದೌರ್ಬಲ್ಯದ ಅರಿವಾಗಿ ತಮ್ಮ ಸುಧಾರಣೆ ಮಾಡವಂತಾಗಬೇಕು. ವ್ಯಕ್ತಿಗಳು ಹುದ್ದೇದಾರರ ಮೇಲೆ ಬೇಸರಗೊಳ್ಳುವ ರೀತಿಯಲ್ಲಿ ಆಗಿರಬಾರದು. ಅದಕ್ಕಾಗಿ ಮೊಟ್ಟಮೊದಲಾಗಿ ಕೇಂದ್ರದ, ಜಮಾಅತಿನ ಮತ್ತು ಶಾಖಾ ಸಂಘಟನೆಯ ಎಲ್ಲ ಹುದ್ದೇದಾರರು ಮತ್ತು ಅವರ ಮಕ್ಕಳು ಮಾದರಿಯಾಗಬೇಕು. ಹುದ್ದೇದಾರರು ಮತ್ತು ಅವರ ಮಕ್ಕಳು ಸ್ವತಃ ನಮಾಝಿನಲ್ಲಿ ಸುಸ್ತಾಗಿದ್ದುಕೊಂಡು ಜಮಾಅತಿನ ಇತರ ವ್ಯಕ್ತಿಗಳನ್ನು ಮತ್ತು ಅವರ ಮಕ್ಕಳನ್ನು ಸಾಮೂಹಿಕ ನಮಾಝ್ ನಿರ್ವಹಿಸಲು ಉಪದೇಶಿಸಲಾಗದು.

2. ಕೇಂದ್ರದ ಮತ್ತು ಜಮಾಅತಿನ ಮಸೀದಿಯಲ್ಲಿ ಫಜ್ರ್ ಮತ್ತು ಅಸರ್ ನಮಾಝಿನ ನಂತರ ನಿಯತವಾಗಿ ಪವಿತ್ರ ಖುರ್‌ಆನ್ ಮತ್ತು ಹದೀಸಿನ ದರ್ಸ್‌ಗಳು ನಡೆಸುವ ವ್ಯವಸ್ಥೆ ಆಗಬೇಕು. ಈ ವೇಳೆಯಲ್ಲಿ ಸಹ ಭಾರಿ ಹಾಜರಿಯಿರುವಂತೆ ಆಗಲು ಜಮಾಅತಿನ ಮತ್ತು ಶಾಖಾ ಸಂಘಟನೆಯ ಹುದ್ದೇದಾರರು ಪ್ರಯತ್ನಿಸಬೇಕು.

3. ಖಲೀಫತುಲ್ ಮಸೀಹರ ಜುಮಾ ಖುತ್‌ಬಗಳು, ಈದ್ ಖುತ್‌ಬಗಳು, ವಿವಿಧ ರಾಷ್ಟ್ರಗಳ ಜಲಸಾಗಳು ಮತ್ತು ಶಾಖಾ ಸಂಘಟನೆಗಳ ಇಜ್‌ತಿಮಾಗಳ ವೇಳೆಯ ಭಾಷಣಗಳನ್ನು ಜಮಾಅತಿನ ವ್ಯಕ್ತಿಗಳು ಸಾಮೂಹಿಕವಾಗಿ ಕೇಳುವಂತಾಗಲು ಜಮಾಅತಿನ ವತಿಯಿಂದ ಪ್ರಭಾವಶಾಲಿ ವ್ಯವಸ್ಥೆ ಇರಬೇಕು. ಇದಕ್ಕಾಗಿ ಸಹ ಮೊಟ್ಟಮೊದಲಾಗಿ ಕೇಂದ್ರದ, ಜಮಾಅತಿನ ಮತ್ತು ಶಾಖಾ ಸಂಘಟನೆಯ ಎಲ್ಲ ಹುದ್ದೇದಾರರು ಅವರ ಮಕ್ಕಳೊಂದಿಗೆ ಹಾಜರಾಗಿ ಮಾದರಿಯಾಗಬೇಕು. ಅನಂತರ ಇತರ ವ್ಯಕ್ತಿಗಳನ್ನು ಉಪದೇಶಿಸಬೇಕು.

4. ಭಾರತದ ಜಮಾಅತಿನ ವ್ಯಕ್ತಿಗಳ ತರಬೇತಿಗಾಗಿ ಜಮಾಅತಿನ ವಾರಪತ್ರಿಕೆಯಾದ ಬದರ್‌ನ ಉರ್ದು ಎಡಿಶನ್ ಅಲ್ಲದೆ ಹಿಂದಿ ಮತ್ತು ಹಲವು ಪ್ರಾದೇಶಿಕ ಭಾಷೆಗಳಲ್ಲಿ ಸಹ ಎಡಿಶನ್ ಶುರುಮಾಡಲಾಗಿದೆ. ಈ ಎಲ್ಲ ಎಡಿಶನ್‌ಗಳಿಂದ ಜಮಾಅತಿನ ವ್ಯಕ್ತಿಗಳು ಎಷ್ಟು ಪ್ರಯೋಜನ ಪಡೆಯುತ್ತಿದ್ದಾರೆ ಎಂದು ಸಹ ಅವಲೋಕಿಸಬೇಕು. ಪ್ರತಿಯೊಂದು ಮನೆಗೆ ಜಮಾಅತಿನ ಈ ಚಾರಿತ್ರಿಕ ಪತ್ರಿಕೆಯು ಖಂಡಿತ ಹೋಗಬೇಕು.

**ಈ ನಿರ್ದೇಶನಗಳನ್ನು ಕಾರ್ಯಗತಗೊಳಿಸಲು:**

ಅ. ಖಾದಿಯಾನ್ ಮತ್ತು ಭಾರತದ ಎಲ್ಲ ಕೇಂದ್ರೀಯ ಮತ್ತು ಪ್ರಾದೇಶಿಕ ಮಟ್ಟದ ಎಲ್ಲ ಮಸೀದಿಗಳು ಮತ್ತು ನಮಾಝ್ ಸೆಂಟರ್‌ಗಳಲ್ಲಿ ಐದು ಹೊತ್ತಿನ ನಮಾಝಿನ ವೇಳೆಯಲ್ಲಿ ಭಾರಿ ಸಂಖ್ಯೆಯಲ್ಲಿ ಹಾಜರಿ ಉಂಟಾಗುವಂತಾಗಲು ಕೇಂದ್ರ, ಜಮಾಅತ್ ಮತ್ತು ಶಾಖಾ

ಸಂಘಟನೆಯ ಹುದ್ದೇದಾರರ ಮೂಲಕ ಮೇಲಿನ ನಿರ್ದೇಶನಗಳ ಬೆಳಕಲ್ಲಿ ಕೆಲಸ ಶುರು ಮಾಡಬೇಕು.

ಆ. ಪ್ರತಿ ಜುಮಾ ವೇಳೆಯಲ್ಲಿ ಖಲೀಫತುಲ್ ಮಸೀಹರ ಲೈವ್ ಖುತ್‌ಬ ಜುಮಾ, ಈದ್ ಖುತ್‌ಬಗಳು, ವಿವಿಧ ರಾಷ್ಟ್ರಗಳ ಜಲಸಾಗಳು ಮತ್ತು ಶಾಖಾ ಸಂಘಟನೆಗಳ ಇಜ್‌ತಿಮಾಗಳ ವೇಳೆಯ ಭಾಷಣಗಳನ್ನು ಜಮಾಅತಿನ ವ್ಯಕ್ತಿಗಳಿಗೆ ಸಾಮೂಹಿಕವಾಗಿ ತೋರಿಸಲು ಭಾರತದ ಎಲ್ಲ ಜಮಾಅತುಗಳಲ್ಲಿ, ಕೇಂದ್ರೀಯ ಮತ್ತು ಪ್ರಾದೇಶಿಕ ಮಸೀದಿಗಳಲ್ಲಿ/ ನಮಾಝ್ ಸೆಂಟರ್‌ಗಳಲ್ಲಿ ಎಂ.ಟಿ.ಎ. ವ್ಯವಸ್ಥೆ ಮಾಡಬೇಕು. ಈ ಎಲ್ಲ ಸಂದರ್ಭಗಳಲ್ಲಿ ವಿಶೇಷವಾಗಿ ಖಾದಿಯಾನಿನಲ್ಲಿ ತಮ್ಮ ತಮ್ಮ ಸ್ಥಳೀಯ ಮಸೀದಿಗಳಲ್ಲಿ ಅಲ್ಲಿ ವಾಸಿಸುವ ಎಲ್ಲ ಕೇಂದ್ರೀಯ ಆಫೀಸರರು, ಉದ್ಯೋಗಸ್ಥರು ಜಮಾಅತಿನ ಮತ್ತು ಶಾಖಾ ಸಂಘಟನೆಯ ಎಲ್ಲ ಹುದ್ದೇದಾರರು ಅವರ ಮಕ್ಕಳೊಂದಿಗೆ ಮೊಟ್ಟಮೊದಲಾಗಿ ಸ್ವತಃ ಹಾಜರಾಗಿರಬೇಕು. ಈ ವೇಳೆಯಲ್ಲಿ ಹಾಜರಾಗದ ಜಮಾಅತಿನ ಎಲ್ಲ ವ್ಯಕ್ತಿಗಳ ಹೆಸರುಗಳನ್ನು ರಹಸ್ಯವಾಗಿ ಸ್ಥಳೀಯ ಹುದ್ದೇದಾರರು ಬರೆದಿಡಬೇಕು. ಅನಂತರ ಇಂತಹ ವ್ಯಕ್ತಿಗಳ ಗಮನಹರಿಸಲು ಮತ್ತು ಅವರ ಸುಧಾರಣೆ ಮಾಡಲು ಸ್ಥಳೀಯ ಹುದ್ದೇದಾರರು ಮತ್ತು ಇಸ್ಲಾಹೀ ಸಮಿತಿ ಸೇರಿ ಕೆಲಸಮಾಡಬೇಕು.

ಇ. ವಾರಪತ್ರಿಕೆಯಾದ ಬದರ್‌ನ ವಿವಿಧ ಪ್ರಾದೇಶಿಕ ಭಾಷೆಗಳ ಎಡಿಶನ್ ಜಮಾಅತಿನ ಪ್ರತಿಯೊಬ್ಬ ವ್ಯಕ್ತಿಯ ಮನೆಗೆ ತಲುಪಿಸಲು ಸಂಪೂರ್ಣವಾದ ಶ್ರಮ ಶುರುಮಾಡಬೇಕು. ಆವಶ್ಯವೆಂದು ತೋರುವ ಇತರ ಭಾಷೆಗಳಲ್ಲಿ ಸಹ ಬದರಿನ ಎಡಿಶನ್‌ಗಳನ್ನು ಆರಂಭಿಸುವ ಸಲುವಾಗಿ ಇದ್ದ ರೀತಿಯಂತೆ ಕೆಲಸ ಮಾಡಬೇಕು.

ಮೇಲಿನ ಎಲ್ಲ ನಿರ್ದೇಶನಗಳನ್ನು ಖಾದಿಯಾನ್ ಮತ್ತು ಭಾರತದ ಎಲ್ಲ ಜಮಾಅತುಗಳಿಗೆ ಸುತ್ತೋಲೆ ಮುಖಾಂತರ ತಾಕೀತು ಮಾಡಬೇಕು. ಈ ಎಲ್ಲ ನಿರ್ದೇಶನಗಳನ್ನು ಜಮಾಅತಿನ ಮತ್ತು ಉಪಸಂಘಟನೆಗಳ ವತಿಯಿಂದ ಎಲ್ಲರಿಗೂ ಸುತ್ತೋಲೆ ಮೂಲಕ ತಲುಪಿಸಬೇಕು. ಇದರ ಪ್ರಕಾರ ಎಲ್ಲ ಜಮಾಅತುಗಳಲ್ಲಿ ಬೇಗನೆ ಕೆಲಸ ಶುರುಮಾಡಬೇಕು. ಮೇಲಿನ ಎಲ್ಲ ಸಂಗತಿಗಳಿಗೆ ಸಂಬಂಧಪಟ್ಟ ಕೆಲಸಗಳ ಮಾಸಿಕ ರಿಪೋರ್ಟ್‌ಗಳನ್ನು ನೀಡಲಿಕ್ಕಾಗಿ ಜಮಾಅತ್ ಮತ್ತು ಶಾಖಾ

ಸಂಘಟನೆಯ ಮಟ್ಟದ ಮಾಸಿಕ ರಿಪೋರ್ಟಿನಲ್ಲಿ ಒಂದು ಕಾಲಮ್ ಹೆಚ್ಚಿಸಬೇಕು. ಎಲ್ಲ ಸಂಬಂಧಪಟ್ಟ ಹುದ್ದೇದಾರರು ಈ ಸಂಗತಿಗಳ ಬಗ್ಗೆ ಸಹ ಪ್ರತಿ ತಿಂಗಳು ತಮ್ಮ ರಿಪೋರ್ಟಿನಲ್ಲಿ ತಮ್ಮ ಕೆಲಸಕಾರ್ಯಗಳ ವಿವರ ಬರೆಯಬೇಕು.

ಅದೇ ರೀತಿ ಮೇಲಿನ ಸಂಗತಿಗಳಿಗೆ ಸಂಬಂಧಪಟ್ಟು ಸ್ಥಳೀಯ ಹುದ್ದೇದಾರರು ಕೆಲಸ ಮಾಡುವುದರ ಅರ್ಥ ಸ್ಥಳೀಯ ಮಟ್ಟಕ್ಕಿಂತ ಮೇಲಿನ ಜಮಾಅತಿನ ಮತ್ತು ಉಪ ಸಂಘಟನೆಗಳ ಹುದ್ದೇದಾರರಿಗೆ ಈ ವಿಷಯವಾಗಿ ಯಾವುದೇ ಜವಾಬ್ದಾರಿ ಇಲ್ಲ ಎಂದಲ್ಲ. ಕೊನೆಯ ಜವಾಬ್ದಾರಿ ಪ್ರಾದೇಶಿಕ ಮಟ್ಟಕ್ಕಿಂತ ಮೇಲಿನ ಹುದ್ದೇದಾರರದ್ದೇ ಆಗಿದೆ. ಆದ್ದರಿಂದ ಇವರೆಲ್ಲರೂ ತಮ್ಮ ತಮ್ಮ ಜವಾಬ್ದಾರಿಗಳ ಹಕ್ಕನ್ನು ಈಡೇರಿಸಬೇಕು ಮತ್ತು ಎಲ್ಲ ರೀತಿಯ ಮೇಲ್ನೋಟ ವಹಿಸಬೇಕು. ಭಾರತದ ಜಮಾಅತುಗಳಲ್ಲಿ ಮೇಲಿನ ನಿರ್ದೇಶನಗಳ ಪ್ರಕಾರ ಎಲ್ಲ ವ್ಯವಸ್ಥೆಗಳನ್ನು ಮತ್ತು ಕೆಲಸಗಳನ್ನು ಪೂರ್ತಿ ಮಾಡುವ ಮುಖ್ಯ ಜವಾಬ್ದಾರಿ ಸದರ್/ಅಮೀರ್ ಜಮಾಅತ್ ಮತ್ತು ಶಾಖಾ ಸಂಘಟನೆಗಳ ಪ್ರಾದೇಶಿಕ ಖಾಇದ್/ಝುಈಮ್/ಸದರ್ ಲಜ್‌ನಾಗೆ ಆಗಿರುವುದು. ಅದೇ ರೀತಿಯಲ್ಲಿ, ಖಾದಿಯಾನಿನಲ್ಲಿ ಅಮೀರ್ ಮಖಾಮಿ ಮತ್ತು ಕೇಂದ್ರೀಯ ಶಾಖಾ ಸಂಘಟನೆಗಳ ಸದರ್ ತಮ್ಮ ತಮ್ಮ ಕಾರ್ಯಕ್ಷೇತ್ರದೊಳಗೆ ಜವಾಬ್ದಾರರು ಆಗಿರುವರು. ಹೇಗಿದ್ದರೂ ಕೆಳಗಿನ ಮಟ್ಟದಿಂದ ಮೇಲಿನ ಮಟ್ಟದವರೆಗಿನ ಶಾಖಾ ಸಂಘಟನೆಗಳ ಮತ್ತು ಜಮಾಅತಿನ ಎಲ್ಲ ಹುದ್ದೇದಾರರು ಪ್ರಾರ್ಥನೆಯೊಂದಿಗೆ ತಮ್ಮ ಮತ್ತು ತಮ್ಮ ಮಕ್ಕಳ ಮಾದರಿಯನ್ನು ತೋರಿಸುತ್ತಾ ಅಸಾಧಾರಣವಾದ ರೀತಿಯಲ್ಲಿ ಮೇಲಿನ ವಿಷಯಗಳಿಗೆ ಸಂಬಂಧಪಟ್ಟು ಕೆಲಸ ಮಾಡಿದರೆ ಮಾತ್ರ ಉತ್ತಮ ಫಲಿತಾಂಶಗಳು ಬರಲು ಶುರುವಾಗುವುವು. ಅಲ್ಲಾಹನು ನಿಮಗೆಲ್ಲರಿಗೂ ಅದರ ಸೌಭಾಗ್ಯ ನೀಡಲಿ.

(WTT-8420/12.08.2015)

ಮೇಲಿನ ಮುಖ್ಯವಾದ ನಿರ್ದೇಶನಗಳಿಗೆ ಸಂಬಂಧಿಸಿ ಒಂದು ಕೇಂದ್ರೀಯ ಸಮಿತಿಯಲ್ಲಿ ಸಮಾಲೋಚನೆ ನಡೆಸಿ ಮೇಲಿನ ನಿರ್ದೇಶನಗಳನ್ನು ನಮೂದಿಸಿ ಪ್ರತಿಯೊಂದು ನಿರ್ದೇಶನವನ್ನು

ಕಾರ್ಯರೂಪಕ್ಕೆ ತರಲು ಒಂದು ಪ್ರವರ್ತನಾ ರೂಪರೇಷೆ ತಯಾರಿಸಿ ಎಲ್ಲ ಜಿಲ್ಲಾ ಅಮೀರ್, ಅಮೀರ್ ಮತ್ತು ಸದರ್ ಜಮಾಅತ್ ಮತ್ತು ಮುಬಲ್ಲಿಗರಿಗೆ ಆಗಸ್ಟ್ 2015ರಲ್ಲಿ ಸುತ್ತೋಲೆ ರೂಪದಲ್ಲಿ ಕಳುಹಿಸಲಾಗಿತ್ತು.

ಈ ಸಲಹೆ ಮತ್ತು ರೂಪರೇಷೆಯ ರಿಪೋರ್ಟ್ ಖಲೀಫತುಲ್ ಮಸೀಹರ ಮುಂದೆ ಸಮರ್ಪಿಸಲಾದಾಗ ಹುಝೂರ್ ಹೀಗೆ ನಿರ್ದೇಶಿಸಿದ್ದರು:

"ಸರಿ, ಕಳುಹಿಸಲಾದ ನಿರ್ದೇಶನಗಳ ಪ್ರಕಾರ ಬೇಗನೆ ಕೆಲಸ ಶುರುಮಾಡಿಸಿರಿ. ಅಲ್ಲಾಹನು ಎಲ್ಲ ಹುದ್ದೇದಾರರಿಗೆ ತಮ್ಮ ತಮ್ಮ ಜವಾಬ್ದಾರಿಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಲು ಶಕ್ತಿ ದಯಪಾಲಿಸಲಿ ಮತ್ತು ಪ್ರತಿಯೊಂದು ಹೆಜ್ಜೆಯಲ್ಲಿ ತನ್ನ ಸಹಾಯ ಮತ್ತು ನೆರವು ದಯಪಾಲಿಸಲಿ. (ಆಮೀನ್)

(ಖಲೀಫತುಲ್ ಮಸೀಹರ ಪತ್ರ, WTT-8587/18.08.2015)

ಮೇಲಿನ ಮುಖ್ಯವಾದ ನಾಲ್ಕು ನಿರ್ದೇಶನಗಳನ್ನು ಕಾರ್ಯರೂಪಕ್ಕೆ ತರಲು ಮತ್ತು ಉತ್ತಮವಾದ ಫಲಿತಾಂಶಗಳನ್ನು ಪಡೆಯಲು ನಝಾರತ್ ಉಲ್‌ಯಾದ ಮಾಸಿಕ ರಿಪೋರ್ಟ್ ಫಾರಮ್‌ನಲ್ಲಿ ಇದಕ್ಕಾಗಿ ಒಂದು ಕಾಲಮ್ ಹೆಚ್ಚಿಸಲಾಗಿದೆ. ಅದರ ನಮೂನೆ ಕೊನೆಯಲ್ಲಿ ಕೊಡಲಾಗಿದೆ.

ಭಾರತದ ಜಮಾಅತುಗಳಲ್ಲಿ ವರ್ಧಿಸುತ್ತಿರುವ ತರಬೇತಿ ಸಮಸ್ಯೆಗಳನ್ನು ತಕ್ಷಣ ಬಗೆಹರಿಸಲು ಖಲೀಫತುಲ್ ಮಸೀಹರು ಖಾದಿಯಾನಿನಲ್ಲಿ ಒಂದು ಕೇಂದ್ರೀಯ ಇಸ್ಲಾಹೀ ಸಮಿತಿ ಸ್ಥಾಪಿಸಿರುವರು. ಅದರ ಸದರಾಗಿ ಸನ್ಮಾನ್ಯ ನಾಝಿರ್ ಆಲ್‌ಲಾ ಖಾದಿಯಾನ್‌ರನ್ನು ಮತ್ತು ಸೆಕ್ರೆಟರಿಯಾಗಿ ಸನ್ಮಾನ್ಯ ನಾಝಿರ್ ಸಾಹಿಬ್ ಇಸ್ಲಾಹೋ ಇರ್‌ಶಾದ್ ಮರ್ಕಝಿಯಾರನ್ನು ನೇಮಿಸಿರುವರು. ಭಾರತದ ಎಲ್ಲ ಜಮಾಅತುಗಳಲ್ಲಿ ಸಹ ಕೆಳಗಿನ ವಿವರ ಪಟ್ಟಿಯ ಪ್ರಕಾರ ಇಸ್ಲಾಹೀ ಸಮಿತಿಗಳನ್ನು ಸ್ಥಾಪಿಸಲು ನಿರ್ದೇಶಿಸಿದ್ದಾರೆ:

| | ಹುದ್ದೆ | ಕ್ಷೇತ್ರೀಯ (ಹಲ್‌ಖಾ) ಮಟ್ಟದಲ್ಲಿ | ಪ್ರಾದೇಶಿಕ ಜಮಾಅತ್ ಮಟ್ಟದಲ್ಲಿ |
|---|---|---|---|
| 1 | ಸದರ್ ಇಸ್ಲಾಹೀ ಸಮಿತಿ | ಸದರ್ ಹಲ್‌ಖಾ | ಪ್ರಾದೇಶಿಕ ಸದರ್/ಅಮೀರ್ ಜಮಾಅತ್ |
| 2 | ಸೆಕ್ರಿಟರಿ ಇಸ್ಲಾಹೀ ಸಮಿತಿ | ಸೆಕ್ರಿಟರಿ ಇಸ್ಲಾಹೊ ಇರ್‌ಶಾದ್ ಹಲ್‌ಖಾ | ಪ್ರಾದೇಶಿಕ ಸೆಕ್ರಿಟರಿ ಇಸ್ಲಾಹೊ ಇರ್‌ಶಾದ್ |
| 3 | ಮೆಂಬರ್ | ಸೆಕ್ರಿಟರಿ ಉಮೂರೆ ಆಮ್ಮ ಹಲ್‌ಕಾ | ಪ್ರಾದೇಶಿಕ ಸೆಕ್ರಿಟರಿ ಉಮೂರೆ ಆಮ್ಮ |
| 4 | ಮೆಂಬರ್ | ಝುಈಮ್ ಹಲ್‌ಖಾ ಖುದ್ದಾಮುಲ್ ಅಹ್ಮದಿಯಾ | ಮುಹ್ತಮಿಮ್ ಮಖಾಮಿ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ |
| 5 | ಮೆಂಬರ್ | ಝುಈಮ್ ಹಲ್‌ಖಾ ಅನ್ಸಾರುಲ್ಲಾಹ್ | ಮಖಾಮಿ ಝುಈಮ್ ಆಲ್‌ಲಾ ಮಜ್ಲಿಸ್ ಅನ್ಸಾರುಲ್ಲಾಹ್ |
| 6 | ಮೆಂಬರ್ | ಸದರ್ ಲಜ್‌ನಾ ಹಲ್‌ಖಾ | ಪ್ರಾದೇಶಿಕ ಸದರ್ ಲಜ್‌ನಾ |
| 7 | ಮೆಂಬರ್ | ಮುಬಲ್ಲಿಗ್/ಮುಅಲ್ಲಿಮ್ ಹಲ್‌ಖಾ | ಮುರಬ್ಬಿ ಲೋಕಲ್ ಅಂಜುಮನ್ |

(WTT-226/11.11.2015)

ಪ್ರತಿ ತಿಂಗಳು ನಿಯತವಾಗಿ ಇಸ್ಲಾಹೀ ಸಮಿತಿಯ ಮೀಟಿಂಗ್ ಮಾಡಲು ಮತ್ತು ರಿಪೋರ್ಟ್ ನೀಡಲು ಖಲೀಫತುಲ್ ಮಸೀಹರ ನಿರ್ದೇಶನ ಪ್ರಕಾರ ಕೇಂದ್ರೀಯ ಇಸ್ಲಾಹೀ ಸಮಿತಿ ಒಂದು ರಿಪೋರ್ಟ್ ಫಾರಮ್ ತಯಾರುಮಾಡಿ ಮಂಜೂರಾತಿ ಪಡೆದಿದೆ. ಅದನ್ನು ಮುಂದೆ ಕೊಡಲಾಗಿದೆ.

ಈಗ ಕೆಲಸ ಮಾಡುವ ಮತ್ತು ಮಾಡಿಸುವ ಆವಶ್ಯಕತೆ ಇದೆ. ಅಲ್ಲಾಹನು ಎಲ್ಲ ಹುದ್ದೇದಾರರಿಗೆ ತನ್ನ ಅನುಗ್ರಹದಿಂದ ಅದರ ಸೌಭಾಗ್ಯ ನೀಡಲಿ. ಆಮೀನ್.

(ಅಮೀರ್/ಸದರ್ ಜಮಾಅತಿಗಾಗಿ ಮಾಸಿಕ ರಿಪೋರ್ಟ್ ಫಾರಮ್)

ಖಲೀಫತುಲ್ ಮಸೀಹರ ನಾಲ್ಕು ಮುಖ್ಯ ನಿರ್ದೇಶನಗಳ ಪ್ರಕಾರ ನಡೆಯುತ್ತಿರುವ ಕೆಲಸಗಳ ರಿಪೋರ್ಟಿನ ವಿಶೇಷ ಕಾಲಮ್

| | ಸವಾಲು | ರಿಪೋರ್ಟ್ | ರಿಮಾರ್ಕ್ |
|---|---|---|---|
| 1 | ಜಮಾಅತಿನ ಎಲ್ಲ ಹುದ್ದೇದಾರರ ಮತ್ತು ಅವರ ಮಕ್ಕಳ (ಯಾರ ಮೇಲೆ ನಮಾಝ್ ಕಡ್ಡಾಯವಾಗಿದೆಯೋ) ಹೆಸರುಪಟ್ಟಿ ತಯಾರು ಮಾಡಲಾಗಿದೆಯೇ? | | |
| 2 | ಇದರ ಪ್ರಕಾರ ಜಮಾಅತಾಗಿ ನಮಾಝ್, ಖುರ್ಆನ್/ಹದೀಸ್/ಮಲ್‌ಫೂಝಾತ್‌ನ ದರ್ಸುಗಳಲ್ಲಿ ಅವರ ಭಾಗವಹಿಸುವಿಕೆಯ ಮೇಲ್ನೋಟ ವಹಿಸಲಾಗುತ್ತಿದೆಯೇ? | | |
| i | ಎಷ್ಟು ಹುದ್ದೇದಾರರು ಮತ್ತು ಅವರ ಮಕ್ಕಳು ಅವುಗಳನ್ನು ಪಾಲಿಸುತ್ತಿದ್ದಾರೆ? | | |
| ii | ಎಷ್ಟು ಹುದ್ದೇದಾರರು ಮತ್ತು ಅವರ ಮಕ್ಕಳು ಅವುಗಳನ್ನು ಪಾಲಿಸುವುದರಲ್ಲಿ ಸುಸ್ತು ತೋರಿಸುತ್ತಿದ್ದಾರೆ? | | |
| iii | ಜಮಾಅತಿನ ಇತರ ವ್ಯಕ್ತಿಗಳ ಹಾಜರಿಯ ಸ್ಥಿತಿಯೇನು? | | |
| 3 | ಖಲೀಫತುಲ್ ಮಸೀಹರ ಖುತ್‌ಬ ಮತ್ತು ಇತರ ಭಾಷಣಗಳನ್ನು ಲೈವ್ ತೋರಿಸುವ ಏರ್ಪಾಡು ಇದೆಯೇ? | | |
| i | ಮಸೀದಿ/ನಮಾಝ್ ಸೆಂಟರ್‌ಗಳಲ್ಲಿ ಎಷ್ಟು ಹುದ್ದೇದಾರರು ಮತ್ತು ಅವರ ಮಕ್ಕಳು ಒಟ್ಟು ಸೇರಿ ಖಲೀಫತುಲ್ ಮಸೀಹರ ಲೈವ್ ಖುತ್‌ಬ ಕೇಳುತ್ತಾರೆ? | | |
| ii | ಜಮಾಅತಿನ ಇತರ ಎಷ್ಟು ವ್ಯಕ್ತಿಗಳು ಒಟ್ಟು ಸೇರಿ ಖುತ್‌ಬ ಖುತ್‌ಬ ಜುಮುಅ ಕೇಳುತ್ತಾರೆ? | | |
| 4 | ಎಷ್ಟು ಮನೆಗಳಲ್ಲಿ ಬದ್ರ್ ಪತ್ರಿಕೆ ಖರೀದಿಸಲಾಗುತ್ತಿದೆ? | | |
| i | ಇತರ ಮನೆಗಳಲ್ಲಿ ಪತ್ರಿಕೆ ಜಾರಿಗೊಳಿಸಲು ಯಾವ ರೀತಿಯ ಪ್ರಯತ್ನ ನಡೆಯುತ್ತಿದೆ? | | |

بِسۡمِ اللّٰہِ الرَّحۡمٰنِ الرَّحِیۡمِ

Islahi Committee Report Form (Kannada)

**ಇಸ್ಲಾಹೀ ಸಮಿತಿಯ ರಿಪೋರ್ಟ್ ಫಾರಮ್**

ಜಮಾಅತಿನ ಹೆಸರು: ಜಮಾಅತಿನ ಸದಸ್ಯರ ಒಟ್ಟು ಸಂಖ್ಯೆ:

ತಿಂಗಳು: ವರ್ಷ:

**ಸೂಚನೆ:** ಇಸ್ಲಾಹೀ ಸಮಿತಿಗೆ ಈ ಕೆಳಗಿನ ವಿವರಗಳು ಸೆಕ್ರೆಟರಿ ಇಸ್ಲಾಹ್ ವ ಇರ್‌ಶಾದ್, ಸೆಕ್ರೆಟರಿ ಉಮೂರೆ ಆಮ್ಮ, ಖಾಇದ್ ಖುದ್ದಾಮುಲ್ ಅಹ್ಮದಿಯಾ ಝಈಮ್ ಅನ್ಸಾರುಲ್ಲಾಹ್ ಮತ್ತು ಸದರ್ ಲಜ್‌ನಾ ಇಮಾಇಲ್ಲಾಹ್ ಕಡೆಯಿಂದ ಬರಬೇಕು. (ಎಂದರೆ ಇಂತಹ ಖಾದಿಮ್, ಅತ್‌ಫಾಲ್, ಅನ್ಸಾರುಲ್ಲಾಹ್‌ದ ಮೆಂಬರ್ ಮತ್ತು ಲಜ್‌ನಾದಲ್ಲಿ ಇಂತಹ ದೌರ್ಬಲ್ಯಗಳು ಇವೆ ಎಂಬ ವಿವರಗಳು)

| | | |
|---|---|---|
| **ನಮಾಝ್** | ನಮಾಝ್ ನಿರ್ವಹಿಸದವರ ಸಂಖ್ಯೆ ..........................<br>ನಮಾಝ್ ನಿರ್ವಹಿಸದ ಎಷ್ಟು ವ್ಯಕ್ತಿಗಳೊಂದಿಗೆ ಸಂಪರ್ಕ ಮಾಡಲಾಯಿತು? ...................................<br>ಜುಮಾ ನಮಾಝ್ ನಿರ್ವಹಿಸದವರ ಸಂಖ್ಯೆ? ...........<br>ಜುಮಾ ನಮಾಝ್ ನಿರ್ವಹಿಸದ ಎಷ್ಟು ವ್ಯಕ್ತಿ ಗಳೊಂದಿಗೆ ಸಂಪರ್ಕ ಮಾಡಲಾಯಿತು? ....................<br>ಮಾಡಲಾದ ಕಾರ್ಯಗಳ ರಿಪೋರ್ಟ್ .......................<br>................................. | |
| **Live ಖುತ್‌ಬ ಜುಮುಅ ಮತ್ತು ಸಮ್ಮೇಳನಗಳು** | ಮಸೀದಿಗೆ ಹೋಗಿ ಖುತ್‌ಬ ಜುಮುಅ ಕೇಳದವರ ಸಂಖ್ಯೆ<br>.........................................................................<br>ಎಷ್ಟು ವ್ಯಕ್ತಿಗಳೊಂದಿಗೆ ಸಂಪರ್ಕ ಮಾಡಲಾಯಿತು?<br>.........................................................................<br>ಸಮ್ಮೇಳನಗಳಲ್ಲಿ (ಇಜ್ಲಾಸ್) ಭಾಗವಹಿಸದವರ ಸಂಖ್ಯೆ<br>.........................................................................<br>ಮಾಡಲಾದ ಕಾರ್ಯಗಳ ರಿಪೋರ್ಟ್ .......................<br>................................. | |
| **ಜಗಳಗಳು** | ಜಗಳಗಳ ಒಟ್ಟು ಸಂಖ್ಯೆ<br>.....................................................<br>ಗಂಡ –ಹೆಂಡತಿಯರ ಜಗಳಗಳ ಸಂಖ್ಯೆ | |

| | | |
|---|---|---|
| | ..............................<br>ಆಸ್ತಿಗಳ ಕ್ರಯ ವಿಕ್ರಯಗಳ ಜಗಳಗಳು .....................<br><br>..............................................................................<br>ಪರಸ್ಪರ ಜಗಳಗಳ ಸಂಗತಿಗಳು .............................<br>.............................................<br>ಪರಸ್ಪರ ಮೊಕದ್ದಮೆಗಳ ಸಂಖ್ಯೆ<br>............................................<br>ಜಮಾಅತಿನ ಎಷ್ಟು ವ್ಯಕ್ತಿಗಳು ಕೋರ್ಟಿನಲ್ಲಿ ಮೊಕದ್ದಮೆ ದಾಖಲಿಸಿದ್ದಾರೆ? ....................................................<br>.................................................................................<br>ಈ ವಿಷಯವಾಗಿ ಮಾಡಲಾದ ಇಸ್ಲಾಹೀ (ಸುಧಾರಣೆ) ಕೆಲಸಗಳ ಫಲಿತಾಂಶ ............................................<br>............................................................................... | |
| **ರಿಶ್ತ ನಾತಾ** | ಎಷ್ಟು ವ್ಯಕ್ತಿಗಳು ಅಹ್ಮದಿಯೇತರರೊಂದಿಗೆ ವಿವಾಹ ಸಂಬಂಧ ಮಾಡಿದ್ದಾರೆ? ..........................................<br>.............................................................................<br>ಎಷ್ಟು ವ್ಯಕ್ತಿಗಳು ಇಂತಹ ಸಂಬಂಧ ಮಾಡಲು ಇಚ್ಛಿಸುತ್ತಿದ್ದಾರೆ? (ರಿಪೋರ್ಟ್‌ನೊಂದಿಗೆ ಹೆಸರು ನಮೂದಿಸಿರಿ) ........<br>...............................................................................<br>ಮನವರಿಕೆ ಮಾಡಿಸಲು ಮಾಡಲಾದ ಕೆಲಸಗಳ ಫಲಿತಾಂಶ ............................................................ | |
| **ಇತರ ಸಂಗತಿಗಳು** | ಹುದ್ದೇದಾರರು ಮತ್ತು ಮುಬಲ್ಲಿಗ್/ಮುಅಲ್ಲಿಮ್‌ರ ಪರಸ್ಪರ ಸಂಬಂಧ ಹೇಗಿದೆ?<br>.............................................................<br>ಹುದ್ದೇದಾರರ ಪರಸ್ಪರ ಸಂಬಂಧ ಹೇಗಿದೆ?<br>..........................<br>ಪರ್ದಾ ಮಾಡದ ಲಜ್‌ನಾದ ಸಂಖ್ಯೆ?<br>..................................<br>ಇಂಟರ್‌ನೆಟ್‌ನ ದುರುಪಯೋಗ ಮಾಡುವವರ ಸಂಖ್ಯೆ? .........<br><br>ಕೆಟ್ಟವರ ಸಂಗ ಹೊಂದಿದವರ ಸಂಖ್ಯೆ? | |

| | | |
|---|---|---|
| | .................................<br>ಮಾದಕ ವಸ್ತುಗಳ ಸೇವನೆಯ ಅಭ್ಯಾಸ ಹೊಂದಿದವರ ಸಂಖ್ಯೆ?<br>................................................................................<br>ಈ ಎಲ್ಲದರ ಸುಧಾರಣೆಗೆ ಮಾಡಲಾದ ಪ್ರಯತ್ನಗಳ ಫಲಿತಾಂಶ ............................................................. | |

| ರಿಪೋರ್ಟಿನ ಬಗ್ಗೆ ಅಭಿಪ್ರಾಯ: |
|---|
| |

ಇಸ್ಲಾಹೀ ಸಮಿತಿಯ ಸದರಿನ (ಅಧ್ಯಕ್ಷ) ಹೆಸರು:

ಸಹಿ ಮತ್ತು ದಿನಾಂಕ

E – mail Address:

Pin Code:

ಮೊಬೈಲ್ ನಂ:

ವಿಳಾಸ: